MR. SPEAKER.—Hon. member Sri Y. Ramakrishna will continue his speech on the Resolution The resolution was moved during the previous session on 8th August 1978.

Resolution

Re : Providing civic amenities to the slum Area dwellels of Bangalore city (contd from 8.8.1978.)

† ಶ್ರೀ ವೈ. ರಾಮಕೃಷ್ಣ (ಆನೇಕಲ್) — ಸಭಾಧ್ಯಕ್ಷರೇ, ಕಳೆದಸಾರಿ ಇದರ ಮೇಲೆ ಮಾತನಾಡುತ್ತಾ ಕೆಲವಾರು ವಿಚಾರಗಳನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ನಾನು ಹೇಳ ತಕ್ಕಂಥಾದ್ದು ಇಷ್ಟೆ ; ಇದು ಸುಸಮಯಕ್ಕೇ ಇಲ್ಲಿ ಬಂದಿದೆ. ನಮ್ಮ ಮಾನ್ಯ ರೆವೆನ್ಯೂ ಮಂತ್ರಿಯವರು ನಮ್ಮ ಏದುರಿನಲ್ಲಿ ಕುಳಿತಿದ್ದಾರೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಸರ್ಕಾರದ ಜಮೀನಿನ ಮೇಲೆ ಗುಡಿಸಲುಗಳನ್ನು ಕಟ್ಟಿ ಸ್ಲಮ್‌ಗಳನ್ನು ಕ್ರಿಯೇಟ್ ಮಾಡಿರತಕ್ಕಂಥ ಜನರನ್ನು ಕಳೆದ ೧೫ ದಿವಸಗಳಿಂದೀಚೆಗೆ ಅಲ್ಲಿಂದ ಓಡಿಸತಕ್ಕಂಥ ಪ್ರಸಂಗಗಳು ಬೆಳಕಿಗೆ ಬಂದಿದೆ. ನಾನು ಮಾನ್ಯ ಕಂದಾಯ ಮಂತ್ರಿಯವರನ್ನು ಕೇಳುತ್ತಿದ್ದೇನೆ, ಅವರು ಅಲ್ಲಿ ಗುಡಿಸಲುಗಳನ್ನು ಕಟ್ಟುತ್ತಿದ್ದಾಗ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರು ? ಸರ್ಕಾರದ ಜಮೀನಿನ ಮೇಲೆ ಅರ್‌ಆರ್‌ಸ್ ಸ್ಲಮ್ಸ್ ಪೆಪೆಲಪ್ ಆಗದೇ ಇರುವಂತೆ ನೋಡಿಕೊಳ್ಳಲು ಒಂದು ವಿಶೇಷ ಇಲಾಖೆಯವರಿಗೆ ತಾವು ಅಧಿಕಾರವನ್ನು ಕೊಟ್ಟಿದ್ದೀರಿ. ತಾವು ತಹಸೀಲ್ದಾರ್‌ರವರನ್ನು ಇಟ್ಟುಕೊಂಡಿದ್ದೀರಿ, ರೆವೆನ್ಯೂ ಇನ್ಸ್‌ಪೆಕ್ಟರನ್ನು ಇಟ್ಟುಕೊಂಡಿದ್ದೀರಿ ಇನ್ನೂ ಹೆಚ್ಚಿನ ಸಿಬ್ಬಂದಿವರ್ಗದವರನ್ನು ಇಟ್ಟುಕೊಂಡಿದ್ದೀರಿ, ಇಷ್ಟೆಲ್ಲಾ ಇದ್ದರೂ ಕೂಡ ಇವತ್ತಿನದಿವಸ ಸ್ಲಮ್‌ಗಳು ಬೆಳೆಯುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ತಮಗೆ ಆ ಜನರಿಂದ ಓಟು ಬೇಕಾದಾಗ ಗುಡಿಸಲುಗಳನ್ನು ಕಟ್ಟಿ ಕೊಳ್ಳುವುದಕ್ಕೆ ಸೈಲೆಂಟ್ ಕನ್‌ಸೆಂಟ್ ಕೊಡುತ್ತೀರಿ ; ಅವರಿಂದ ಓಟು ತೆಗೆದುಕೊಂಡು ಆದಮೇಲೆ ಇವತ್ತಿನದಿವಸ ಅವರನ್ನು ಓಡಿಸುತ್ತಿದ್ದೀರಿ. ಈ ಒಂದು ಸೊಣಕೆಗಾರಿಕೆಯನ್ನು ತಾವು ಯಾರಿಗೆ ಕೊಡುತ್ತೀರಿ. ಬಿಜಾಪುರದಲ್ಲಿ ೧೫ ವರ್ಷಗಳಿಂದ ಜಮೀನು ಮಾಡಿಕೊಂಡಿದ್ದಂಥ ೧೩೬ ಹರಿಜನರನ್ನು ಅಲ್ಲಿಂದ ಜಾಗ ಬಿಡಿಸುವುದಕ್ಕೆ ಪ್ರಯತ್ನ ಪಟ್ಟಾಗ ಇವತ್ತಿನದಿವಸ ಆ ಹರಿಜನರು ಉಪವಾಸ ಕೂತಿದ್ದಾರೆ ಈ ವಿಚಾರವನ್ನು ಮಾನ್ಯ ರೆವೆನ್ಯೂ ಮಂತ್ರಿಯವರ ಗಮನಕ್ಕೆ ತಂದಾಗ ಅವರನ್ನು ಅಲ್ಲಿಂದ ಓಡಿಸಬೇಕೆಂದು ತೀರ್ಮಾನ ಮಾಡಿದ್ದಾರೆ. He has to read not letter ; he has to read in-between the lines Unless he reads the matter in-between the lines ಅವರ ಪ್ರಶ್ನೆ ಬಗೆಹರಿಯುವುದಿಲ್ಲವೆಂದು ಹೇಳುತ್ತಿದ್ದೇನೆ. ತಾವು ಪ್ರತಿನಿತ್ಯ ಅವರ ವಿಚಾರದಲ್ಲಿ ಭಾಷಣ ಮಾಡುವುದಕ್ಕೆ ಹೋಗುತ್ತೀರಿ, ಡಾ॥ ಅಂಬೇಡ್ಕರ್‌ರವರ ವಿಚಾರಗಳ ಬಗ್ಗೆ ಭಾಷಣ ಮಾಡುತ್ತೀರಿ, ಆ ಜನಗಳಿಗಾಗಿ ಮಾಡಿರತಕ್ಕಂಥಾದ್ದು ಇದೇಯೇನು ? Having allowed the slums to come up, it is your job to see that all amenities are provided, or make alternative arrangements for them for their shelter ಅವರನ್ನು ಈ ಕೂಡಲೇ ಕಳಿಸಿಬಿಡಿ ಎಂದು ನಾನು ಹೇಳುತ್ತಾ ಇಲ್ಲ, ಅವರಿಗೆ ಎಲ್ಲಾದರೂ ಸ್ಥಳ ಮಾಡಿಕೊಟ್ಟು ಆದಮೇಲೆ ಅವರನ್ನು ಆ ಜಾಗದಿಂದ ಬಿಡಿಸಬೇಕು ಇಲ್ಲದೇ ಇದ್ದರೆ ಇವತ್ತಿನದಿವಸ ತಾವು ಪಾಪಕ್ಕೆ ತುತ್ತಾಗಬೇಕಾದ ಪರಿಸ್ಥಿತಿ ಒದಗುತ್ತದೆ. ಕಳೆದಸಾರಿ ಭಾಷಣ ಮಾಡುತ್ತಾ ತಾವು ಸ್ಲಮ್ ಕ್ಲಿಯರ್ ಮಾಡಬೇಕು ಎಂಬುದಾಗಿ ಹೇಳಿದ್ದೀರಿ. ಈ ಬಗ್ಗೆ ವಿವಸಕ್ಕೆ ೪ ಸಾರಿ ಭಾಷಣ ಮಾಡುತ್ತೀರಿ. ಆ ಭಾಷಣದ ಜೊತೆಗೆ ಅಲ್ಲಿ ಒಂದೊಂದು ಪ್ರೈಮರಿ ಸ್ಕೂಲ್‌ಗಳನ್ನು, ಪ್ರೀಪ್ರೈಮರಿ ಸ್ಕೂಲ್‌ಗಳನ್ನು ಪ್ರಾರಂಭ ಮಾಡಿದರೆ ತಾವು ಮಾನ್ಯಮಂತ್ರಿಗಳಾಗಿರುವುದಕ್ಕೂ ಸಾರ್ಥಕವಾಗುತ್ತದೆ. ಇನ್ನು ೧೦ ವರ್ಷಗಳಾದರೂ ಅಲ್ಲಿ ಸ್ಲಮ್‌ಗಳು ಬರುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾತನಾಡುತ್ತಾ ಮಾನ್ಯ ಮಂತ್ರಿಯವರು ಅಲ್ಲಿ ಒಂದೊಂದು ಪ್ರೈಮರಿಸ್ಕೂಲಿನ ಹಾಗೂ ಪ್ರೀಪ್ರೈಮರಿ ಸ್ಕೂಲಿನ ಪ್ರಾರಂಭೋತ್ಸವವನ್ನು ಮಾಡಿದರೆ ಸಾರ್ಥಕವಾಗುತ್ತದೆ ಎಂದು ಹೇಳಿದರು. ಅವರು ಸಹ ೨ ವರ್ಷ ಮಂತ್ರಿಗಳಾಗಿದ್ದರು. ಆಗ ಅವರು ಎಷ್ಟೆಷ್ಟು ಶಾಲೆಗಳನ್ನು ತೆರೆದರು, ಎಷ್ಟೆಷ್ಟು ಶಾಲೆಗಳನ್ನು ಮುಚ್ಚಿದರು ಎಂಬ ಬಗ್ಗೆ ಹೇಳಿಬಿಟ್ಟರೆ ಅದು ನಮಗೆ ಮಾರ್ಗದರ್ಶಕವಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಮಾನ್ಯ ಮಂತ್ರಿಯವರು ಚಾಲೆಂಜ್ ತೆಗೆದುಕೊಂಡಿದ್ದಾರೆ. ಅವರು ಇಷ್ಟು ವರ್ಷಗಳಿಂದ ಮಾನ್ಯ ರೆವೆನ್ಯೂ ಮಂತ್ರಿಗಳಾಗಿದ್ದಾರೆ. ನಾನು ಕೇವಲ ೨½ ವರ್ಷ ಮಾತ್ರ ಆರೋಗ್ಯ ಮಂತ್ರಿಯಾಗಿದ್ದೆ, ಈ ಕಾಲದಲ್ಲಿ ೫ಲಕ್ಷ ಎಕರೆಯಷ್ಟು ಜಮೀನನ್ನು ಹರಿಜನರಿಗೆ ಹಂಚಿದ್ದೇವೆ. ಇಂಡಿಯಾ ದೇಶದಲ್ಲಿ ಇನ್ನು ಯಾವ ಸರಕಾರವೂ ಈ ಕೆಲಸವನ್ನು ಮಾಡಲಿಲ್ಲ ಎಂದು ನಾನು ಧೈರ್ಯವಾಗಿ ಹೇಳುತ್ತಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಇನ್ನು ೧೫ ವರ್ಷಗಳ ಕಾಲ ರೆವೆನ್ಯೂ ಮಂತ್ರಿಗಳಾಗಿದ್ದರೂ ಇಷ್ಟು ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಯಾವ ಕೆಲಸ ?

ಶ್ರೀ ವೈ. ರಾಮಕೃಷ್ಣ. ಐದು ಲಕ್ಷ ಎಕರೆ ಜಮೀನನ್ನು ಹರಿಜನರಿಗೆ ಹಂಚಿರುವ ಕೆಲಸ ನೀವು ಕಂದಾಯ ಸಚಿವರಾದ ಮೇಲೆ ಆ ರೀತಿ ಎಷ್ಟು ಎಕರೆ ಜಮೀನನ್ನು ಹರಿಜನರಿಗೆ ಹಂಚಿದ್ದೀರಿ ? ನಿಮಗೆ ಧೈರ್ಯವಿಲ್ಲ. ನೀವು ಕಾಗದದ ಹುಲಿ ; ನಿಮ್ಮ ಕೈಲಿ ಏನೂ ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರ ಮಾತನ್ನು ಗ್ರಹಿಸಿದರೆ, ಕಾಗದದ ಹುಲಿ ಮತ್ತು ನಿಜವಾದ ಹುಲಿಗಳೆರಡಿವೆಯೆಂಬುದು ಗೊತ್ತಾಗುತ್ತದೆ. I request the hon. member to enjoy some humour in the Assembly, not rigmoral things. ಇದನ್ನು ಯಾವ ರೀತಿ ಕೆಲಸ ಮಾಡಿದರೆಂಬುದನ್ನು ನಾನು ನೋಡಿದ್ದೇನೆ, ನಾನು ಯಾವ ರೀತಿ ಕೆಲಸ ಮಾಡಿದ್ದೇನೆ ಮತ್ತು ಮಾಡುತ್ತಿದ್ದೇನೆ ಎನ್ನುವುದನ್ನು ಅವರೂ ನೋಡಿದ್ದಾರೆ. ಮಾನ್ಯ ರಾಮಕೃಷ್ಣ ಅವರು ಮಾಡಿದಷ್ಟು ನಾನು ಮಾಡಿಲ್ಲ ಎಂದು ಅವರೇ ಹೇಳಿದರು. ಇಷ್ಟು ಮಾತ್ರ ಹೇಳಬಲ್ಲೆ : ಅವರು ಏನೇನು ಮಾಡಿದರು ಅಥವಾ ಮಾಡುತ್ತಾರೆ ಅದನ್ನು ನಾನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಅವುಗಳಿಂದ ದೇಶಕ್ಕೆ ಅನುಕೂಲವಾಗುವುದಿಲ್ಲ. ಈಗ ನಾವು ದೇಶಕ್ಕೆ ಮತ್ತು ಬಡಪರಿಗೆ ಅನುಕೂಲವಾಗುವ ಕೆಲಸವನ್ನು ಮಾಡುತ್ತಿದ್ದೇವೆ. ಬಡತನವನ್ನು ಒಂದೇ ದಿವಸದಲ್ಲಿ ನಿವಾರಣೆ ಮಾಡುವುದಕ್ಕಾಗುವುದಿಲ್ಲ. ಸಾವಿರಾರು ವರ್ಷಗಳಿಂದ ಅದನ್ನು ಮಾನ್ಯ ಬೊಮ್ಮಾಯಿ ಅವರ ಸಂತತಿಯವರು ಇಟ್ಟುಕೊಂಡುಬಂದಿದ್ದಾರೆ. ಬಡತನ ಹೋಗಲಾಡಿಸುತ್ತೇವೆ ಎಂದು ಹೇಳಿ, ಎಲ್ಲರಿಗೂ ದುಡ್ಡನ್ನು ಹಂಚುವುದಕ್ಕಾಗುತ್ತದೆಯೆ ? ಕಾರ್ಯಕ್ರಮಗಳನ್ನು ಬಡವರ ಕೈಗೇ ಕೊಡುವುದಕ್ಕಾಗುತ್ತದೆಯೆ ? ಯೋಜನೆಗಳನ್ನು ಹಾಕಿಕೊಂಡು, ಅವುಗಳಿಗೆ ಹಣವನ್ನೊದಗಿಸಿ ಕಾರ್ಯಗತ ಮಾಡಬೇಕು, ಜನರ ಮನಸ್ಸನ್ನು ಬದಲಾವಣೆ ಮಾಡಬೇಕು. ಇದೆಲ್ಲಾ ಬಹಳ ಕಷ್ಟದ ಕೆಲಸ.

ಶ್ರೀ ವೈ. ರಾಮಕೃಷ್ಣ.—ನಾನು ಕೇಳಿದ್ದು ಇಷ್ಟು, ಎರಡು ವರ್ಷಗಳಲ್ಲಿ ನಾವು ಐದು ಲಕ್ಷ ಎಕರೆ ಜಮೀನನ್ನು ಹರಿಜನರಿಗೆ ಹಂಚಿದ್ದೇವೆ, ನೀವು ಕಂದಾಯ ಮಂತ್ರಿಗಳಾಗಿ ಎಷ್ಟು ವರ್ಷಗಳಿಂದ ಇದ್ದೀರಿ ಮತ್ತು ಎಷ್ಟು ಜಮೀನನ್ನು ಹಂಚಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ನೀವು ಹಂಚಿದ್ದೆಲ್ಲ ಪರಭಾರೆಯಾಗಿತ್ತು. ಅದರ ರಕ್ಷಣೆಗೆ ನಾವು ಕಾನೂನು ತರಬೇಕಾಯಿತು, ಪರಭಾರೆ ಮಾಡಿದ್ದೆಲ್ಲ ಅವರಿಗೆ ಕೊಡಬೇಕೆಂದು ಮಾಡಲಾಯಿತು. ಅಲ್ಲದೆ, ಆ ಜಮೀನುಗಳನ್ನು ಪರಭಾರೆ ಮಾಡಬಾರದೆಂದು ಪ್ರತಿಬಂಧಕವನ್ನೂ ಹಾಕಿದ್ದೇವೆ. ಆದರೆ ನೀವು ಕಾಗದದ ಹುಲಿಯಂತೆ ಕೆಲಸ ಮಾಡಿದಿರಿ, ನಾನು ಕಾನೂನು ಮಾಡಿ ಬಡವರಿಗೆ ಸಹಾಯ ನೀಡಿ, ನಿಜವಾದ ಹುಲಿಯಂತೆ ಕೆಲಸ ಮಾಡಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಬಸವಲಿಂಗಪ್ಪನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಸಾವಿರಾರುವರ್ಷಗಳಿಂದ ಬಂದಿರುವ ಬಡತನಕ್ಕೆ ಇಡೀ ಜನಾಂಗವೇ ಕಾರಣ.

ಶ್ರೀ ಬಿ. ಬಸವಲಿಂಗಪ್ಪ,—ನಿಮ್ಮ ಸಂತತಿ ಕಾರಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಮ್ಮ ಮತ್ತು ನಿಮ್ಮ ಪೂರ್ವಜರು ಕಾರಣ. ಅದನ್ನು ನಾವು ಒಪ್ಪಲೇಬೇಕಾಗುತ್ತದೆ. ಅದನ್ನು ಬದಲಾವಣೆ ಮಾಡುವ ವಿಚಾರ ಬರೀ ಮಾತಿನಲ್ಲಾಗುತ್ತಿದೆಯೇ ಹೊರತು ಕೃತಿಯಲ್ಲಾಗಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿರುವುದು. ಇದು ಹರಿಜನರ ಪ್ರಶ್ನೆಯಾದ್ದರಿಂದ ಪ್ರಾಮುಖ್ಯತೆ ಕೊಟ್ಟಿದ್ದೇವೆ ಎನ್ನುವ ಪ್ರಶ್ನೆಯಲ್ಲ. ಈಗಲ್ಲಿ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಅವರನ್ನು ಹೊರಕ್ಕೆ ಹಾಕದಂತೆ ತಡೆ ಆಜ್ಞೆ ಕೊಡಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ಬಿಟ್ಟು ಮಾನ್ಯ ರಾಮಕೃಷ್ಣ ಅವರು ಹುಲಿ ವಿಚಾರ ಮಾತ ನಾಡುತ್ತಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೌದು, ನೀವು ನಿಜವಾದ ಹುಲಿಯಾಗಿ ಬಡ ಜನಗಳ ರಕ್ತ ಕುಡಿಯುತ್ತಿದ್ದೀರಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಾಮಕೃಷ್ಣ ಅವರ ಪ್ರಕಾರ ಹೇಳುವುದಾದರೆ.....

ಶ್ರೀ ಎಸ್.ಆರ್. ಬೊಮ್ಮಾಯಿ.—ನೀವು ಬಹಳ ಮಾಶನಾಡುತ್ತಿದ್ದೀರಿ, ಕೆಲಸ ಮಾತ್ರ ಕಡಿಮೆ. ಭಾಷಣ ಮಾಡುವಾಗ ಅಂಬೇಡ್ಕರ್ ಅವರ ತತ್ವಗಳನ್ನು ಹೇಳುತ್ತೀರಿ, ಆದರೆ ಕೃತಿಯಲ್ಲಿ ಅವನ್ನೇನೂ ಮಾಡೋದಿಲ್ಲ. ನಿಮ್ಮಯಾವುದೇ ಆಜ್ಞೆಗೂ "ಹೆಡ್ ಮಾಸ್ಟರ್" ಅವರ ಸಹಿ ಬೀಳದೆ ಏನೂ ಮಾಡುವುದಕ್ಕಾಗುವುದಿಲ್ಲ. ಅವರನ್ನು ಎದುರಿಸುವುದಕ್ಕೆ ನಿಮಗೆ ಸಾಧ್ಯವಿಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಬಸವಲಿಂಗಪ್ಪನವರು ಮಾಡಿದ್ದನ್ನು ನಮ್ಮ ಹೆಡ್ ಮಾಸ್ಟರ್ ಎತ್ತಿಹಾಕುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ. –ಮಾನ್ಯ ವಿರೋಧ ಪಕ್ಷದ ನಾಯಕರು ಏನೋ ಮಾಡಬೇಕೆಂದು ಹೊರಟಿರುವಂತೆ ಕಾಣುತ್ತದೆ. ನಾನು ಸುಮಾರು ೧೯೫೮ ನೇ ಇಸವಿಯಿಂದಲೂ ಮಂತ್ರಿಯಾಗಿದ್ದೇನೆ. ಮತ್ತೆ ಶ್ರೀ ದೇವರಾಜ ಅರಸ್ ಅವರ ಮಂತ್ರಿ ಮಂಡಲದಲ್ಲಿಯೂ ಮಂತ್ರಿಯಾಗಿದ್ದೇನೆ. ನಾನು ಬಡವರ ಬಗ್ಗೆ ಪಾಕಿಕೊಂಡ ಕಾರ್ಯಕ್ರಮಗಳಿಗೆ ಅವರೆಂದೂ ಬೇಡವೆಂದಿಲ್ಲ. ಹಿಂದುಳಿದವರಿಗೆ, ಹರಿಜನ-ಗಿರಿಜನರಿಗೆ ಮತ್ತು ಬಡವರ್ಗದ ಜನರ ಬಗ್ಗೆ ಯೋಜನೆಗಳನ್ನು ಹಾಕಿಕೊಂಡಾಗ, ಅವರು ಅದರಲ್ಲಿ ಒಂದು ದಿವಸವೂ ಕೈಹಾಕಿದನ್ನು ನಾನು ಕಂಡಿಲ್ಲ. ಅಲ್ಲದೆ ಹರಿಜನರಿಗೆ ಮತ್ತು ಹಿಂದುಳಿದವರಿಗೆ ಜಮೀನು ಕೊಡುವಾಗ, ಏತಕ್ಕೆ ಅವರಿಂದ ಪಣ ವಸೂಲಿ ಮಾಡಬೇಕು, ಪುಕ್ಕಟೆಯಾಗಿ ಕೊಡೋಣವೆಂದು ಹುಕುಂ ಮಾಡಿದವರು ಅವರೇ ಆದುದರಿಂದ, ಮಾನ್ಯ ಅರಕೇರಿಯವರು ಹೇಳಿದ ಸಮಸ್ಯೆಯನ್ನು ನಾನು ವಿಚಾರ ಮಾಡುತ್ತೇನೆ. ಕೇಳಿದಾಕ್ಷಣ ಕೊಡುವುದಕ್ಕೆ.....

ಶ್ರೀ ಎಸ್.ಆರ್. ಬೊಮ್ಮಾಯಿ.—ತಡೆಯಾಜ್ಞೆ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ತಡೆಯಾಜ್ಞೆ ಕೊಡೋಣ, ಮಾಡೋಣ. ಆದರೆ, ಆದನ್ನೇ ಆರೋಪ ಮಾಡಿ, ರಕ್ತ ಕುಡಿಯುವ ಮತ್ತು ಕುಡಿಯದ ಹುಲಿಗಳೆಂದು ಭಾಷಣ ಮಾಡುತ್ತಾ ಮಾನ್ಯ, ರಾಮಕೃಷ್ಣ ಅವರು ಹೊರಟರೆ, ನಾನು ಏನು ಹೇಳಬೇಕು ? ನಿಮ್ಮ ಪ್ರಕಾರ ನಾನು ಕಾಗದದ ಹುಲಿಯಾದರೆ ನೀವು ಅಂದರೆ ನಿಮ್ಮ ಜನತಾ ಪಕ್ಷ ನಿಜವಾದ ಹುಲಿಯಾಗಿ ಅಲ್ಲಿನ ಜನರ ರಕ್ತ ಕುಡಿಯಲಿಕ್ಕೆ ಹೊರಟಿದ್ದೀರಿ. ಆದರೆ, ಇಲ್ಲಿ ಕುಡಿಯುವುದಕ್ಕೆ ನಿಮಗೆ ಅವಕಾಶವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಚರ್ಚೆ ಹೀಗೆ ಬೆಳೆಯಂಬುದು ಬೇಡ. ನೀವು ಯಾವ ರೀತಿ ಬಡವರ ಬಗ್ಗೆ ಕಾನೂನುಗಳನ್ನು ತಂದು ಯೋಜನೆಗಳನ್ನು ಹಾಕಿಕೊಂಡಿದ್ದೀರೆಂದು ನಮಗೆ ಗೊತ್ತಿದೆ. ಆದ್ದರಿಂದ, ಈ ಕಡೆ ಕುಳಿತುಕೊಂಡಿರುವ ನಾವು ಕಳೆದ ಐದು ವರ್ಷಗಳಿಂದಲೂ ನಿಮಗೆ ಬೆಂಬಲ ಕೊಟ್ಟಿದ್ದೇವೆ. ಆದರೆ, ಮಾನ್ಯ ದೇವರಾಜ ಅರಸ್ ಅವರು ತಮ್ಮ ಆಜ್ಞೆಗಳನ್ನು ಯಾವ ರೀತಿಯಿಂದ ತೆಗೆಸಿ ಹಾಕಿದ್ದಾರೆನ್ನುವ ಬಗ್ಗೆ ಉದಾಹರಣೆಗಳಿವೆ. ಅದನ್ನು ಚರ್ಚೆ ಮಾಡುವುದು ಬೇಡ.

ಶ್ರೀ ವೈ. ರಾಮಕೃಷ್ಣ.—ಭೂನ್ಯಾಯ ಮಂಡಳಿಗಳ ಸದಸ್ಯರ ವಿಚಾರ ಸೇರಿಸಿಹೇಳಿ

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗದು ಬೇಡ. ಈಗ ಆಲ್ಲಿಗೆ ತಡೆಯಾಜ್ಞೆ ಕೊಡಿ. ಆಮೇಲೆ ವಿಚಾರಣೆ ಮಾಡಿ ಯೋಗ್ಯ ತೀರ್ಮಾನ ತೆಗೆದುಕೊಳ್ಳಿ. ಜನತಾ ಪಕ್ಷದ ಸರ್ಕಾರಗಳು ಹರಿಜನರ ಅಭಿವೃದ್ಧಿಗಾಗಿ ಅಂತ್ಯೋದಯ ಕಾರ್ಯಕ್ರಮವನ್ನು ಯಾವ ರೀತಿ ತೆಗೆದುಕೊಂಡಿವೆ ಎನ್ನುವುದನ್ನು ತಾವು ಅಭ್ಯಾಸ ಮಾಡಿ. ಅದು ಬಿಟ್ಟು ಸುಮ್ಮನೆ ರಕ್ತ ಕುಡಿಯುತ್ತಿದ್ದಾರೆಂದು ಹೇಳಬೇಡಿ ಸ್ವಲ್ಪ ಕಣ್ತೆರೆದು ನೋಡಿ. ನಿಮಗಿಂತಲೂ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಆಲ್ಲಿನ ಜನತಾ ಸರ್ಕಾರಗಳು ಹಾಕಿ ಕೊಂಡಿವೆ. ಅಲ್ಲಿ ಅವರು ಬರೀ ಮಾತಾಡುತ್ತಿಲ್ಲ, ಆಚರಣೆಯಲ್ಲಿ ತಂದಿದ್ದಾರೆ.

ಶ್ರೀ ವೈ ರಾಮಕೃಷ್ಣ.—ಒಂದೇ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಲು ನಾನಂ ಬಹಳ ನೊಂದ ಮನಸ್ಸಿನಿಂದ ನಿಂತಿದ್ದೇನೆ, ಕೇಂದ್ರದವರು ಹರಿಜನರಿಗಾಗಿ ಮೀಸಲಿಟ್ಟಿದ್ದ ೩೬ ಲಕ್ಷ ರೂಪಾಯಿಗಳನ್ನು ಇವರ ಒಂದು ನೆಗ್ಲಿಜೆನ್ಸ್‌ನಿಂದ ಮತ್ತು ೩೦ನೇ ತಾರೀಖು ಆಗಿಹೋಯಿತೆನ್ನುವ ಕಾರಣದಿಂದ ತರಿಸಲಿಕ್ಕಾಗಲಿಲ್ಲವೆಂದು ಮಾನ್ಯ ಸಚಿವರು ಹೇಳಿಕೆ ಕೊಟ್ಟಿದ್ದಾರೆ. ಬಡಜನರಿಗೆ ಬರಬೇಕಾದ ಗ್ರಾಂಟನ್ನು ತರಿಸಿಕೊಳ್ಳುವಲ್ಲಿ ಆಸಕ್ತಿ ಇಲ್ಲದ ಇವರು ಇನ್ನು ಯಾವ ರೀತಿ ಕೊಳಚೆ ಪ್ರದೇಶ ನಿವಾಸಿಗಳ ಉದ್ಧಾರ ಮಾಡುತ್ತಾರೆ ? ಅದು ಕೇಂದ್ರದ ಸಹಾಯ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಅದರ ಬಗ್ಗೆ ಮಾನ್ಯ ಸಚಿವರು ವಿವರಣೆ ನೀಡಿರುವರು.

ಶ್ರೀ ವೈ. ರಾಮಕೃಷ್ಣ.—ವಿವರಣೆ ಕೊಟ್ಟಾಕ್ಷಣ, ಪುನಃ ಆ ದುಡ್ಡು ಬರುತ್ತದೆಯೇ ? ಹರಿಜನ-ಗಿರಿಜನ ಅಭಿವೃದ್ಧಿ ಕಾರ್ಪೊರೇಷನ್ ಬಗ್ಗೆ ತಾವು ಕೂಡ ಒಂದು ಪ್ರಶ್ನೆ ಹಾಕಿದ್ದೀರಿ. ಅದರಲ್ಲಿ ಕೇವಲ ೧೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಆದರೆ, ಪಕ್ಕದ ರಾಜ್ಯದಲ್ಲಿ ಕೋಟಿಗಟ್ಟಲೆ ಖರ್ಚು ಮಾಡುತ್ತಿದ್ದಾರೆ. ಜನತಾ ಸರ್ಕಾರ ಹರಿಜನರಿಗೆ ಸಹಾಯ ಮಾಡುತ್ತೇವೆಂದರೂ ಆ ಸಹಾಯ ಧನವನ್ನು ಪಡೆಯುವುದಕ್ಕೂ ನೀವು ಪ್ರಯತ್ನ ಮಾಡುವುದಿಲ್ಲ. ಆ ಜನಕ್ಕೆ ಜಮೀನು ಎಷ್ಟು ಕೊಟ್ಟಿದ್ದೀರಿ ? ಅವರು ನಿಜವಾಗಿ ಉದ್ಧಾರವಾಗಿಲ್ಲ. ಒಂದು ಮಾತು ಹೇಳುವುದಕ್ಕೆ ಇಷ್ಟ ಪಡುತ್ತೇನೆ, ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ೨೨ ಕೋಟಿ ರೂಪಾಯಿಗಳನ್ನು ಹುಡ್ಕೋಸ್ಕೀಮಿನಲ್ಲಿ ತಂದು ಅಲ್ಲಿನ ಬಡ ಜನತೆಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಅಲ್ಲಿನ ಬೆಸ್ತರ ಕೇರಿಗೆ ಹೋಗಿ ನೋಡಿ, ಹರಿಜನರ ಕೇರಿಗಳನ್ನು ಹೋಗಿ ನೋಡಿ. ನೀವು ತಂದಿರತಕ್ಕಂಥ ದುಡ್ಡು ಕೇವಲ ೫ ಕೋಟಿ ರೂಪಾಯಿಗಳು. ಅದನ್ನು ಕೂಡ ತಂದಂ ಲೇಪ್ಸ್ ಮಾಡಿದ್ದೀರಿ ಹೊರತು ಮನೆಕಟ್ಟಿಸಿಲ್ಲ. ಯಾವ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಿದ್ದೀರಾ ? ನಮ್ಮ ಕಾಲದಲ್ಲಿ ಕೆಲವು ಮಾಡಿದ್ದೇವೆ, ನಿಮ್ಮ ಕಾಲದಲ್ಲಿ ಎಷ್ಟು ಸ್ಲಮ್‌ಗಳನ್ನು ಕ್ಲಿಯರ್ ಮಾಡಿದ್ದೀರಾ ? ಉತ್ತರ ಕೊಡಿ ಶಹಬಾಸ್‌ಗಿರಿ ಕೊಡುತ್ತೇನೆ. ಇವರ ಆಸಕ್ತಿ ಹರಿಜನರು ಅಂದತಕ್ಷಣ ಮತ ಪಡೆಯುವುದು. ಮತ ಪಡೆದ ತಕ್ಷಣ ಇನ್ನು ೫ ವರ್ಷಗಳ ಕಾಲ ಆ ಕಡೆ ತಿರುಗಿ ಕೂಡ ಇವರು ನೋಡುವುದಿಲ್ಲ. ಈಗ ೧೩೭ ಟೌನ್ ಮುನಿಸಿಪಲ್ ಕೌನ್ಸಿಲ್‌ಗಳ ಚುನಾವಣೆ ಬಂದಿವೆ, ಈಗ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ, ಈಗ ಹಣ ಕೊಡದಿದ್ದರೆ ಇನ್ನು ೮ ದಿವಸದಲ್ಲಿ ಒತ್ತಾಯ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಸ್ವಾಮಿ, ಈರೀತಿ ತಾವು ಮಾಡುವುದಾದರೆ ಹರಿಜನರ ಪ್ರಶ್ನೆ ಬಗೆಹರಿಯುವುದಿಲ್ಲ, ಕೊಳಚೆ ಪ್ರದೇಶದ ನಿವಾಸಿಗಳ ಪ್ರಶ್ನೆ ಬಗೆ ಹರಿಯಂವುದಿಲ್ಲ, ಬಡವರ ಪ್ರಶ್ನೆ ಬಗೆಹರಿಯುವುದಿಲ್ಲ. ಇವರು ಬಹಳ ಜಾಣರು, ಇವರ ಪ್ರಶ್ನೆ ಬಗೆ ಹರಿಸಿಕೊಂಡು ಕೂತುಕೊಳ್ಳುತ್ತಾರೆ. ಈ ಮನೋಭಾವ ಮೊದಲು ತಾವು ಬಿಡಬೇಕು. ಹರಿಜನರ ಉದ್ಧಾರದ ಬಗ್ಗೆ ಕೊಳಚೆ ನಿವಾಸಿಗಳ ಉದ್ಧಾರದ ಬಗ್ಗೆ ಮಾನ್ಯ ರಂಗನಾಥರವರು, ಬಸವಲಿಂಗಪ್ಪನವರು, ಪ್ರಭಾಕರ್‌ರವರು ಪೂರ್ತಿ ಮುಂಕುಕವಿಚಿ ಕೊಂಡು ಕುಳಿತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ —ಸ್ವಾಮಿ, ನಾನು ಆಕ್ಷೇಪಣೆ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ಆದು ಅನ್ ಪಾರ್ಲಿಮೆಂಟರಿ ಪದ ಆದರೆ, ವಾಪಸ್ಸು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ನಿಮ್ಮಂಥ ಹಿರಿಯ ಸದಸ್ಯರು ಹೀಗೆ ಮಾತನಾಡುವುದೇ ?

ಶ್ರೀ ವೈ. ರಾಮಕೃಷ್ಣ.—ತಾವು ಈ ಸ್ಥಾನದಲ್ಲಿ ಇನ್ನು ಹೆಚ್ಚಿಗೆ ಪದ ಉಪಯೋಗಿಸುತ್ತಿದ್ದಿರಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಅಧಿಕಾರ ಬಂದಾಗ ಇಬ್ಬರೂ ಹಂಚಿ ಕೊಳ್ಳುತ್ತಾರೆ.

ಶ್ರೀ ವೈ. ರಾಮಕೃಷ್ಣ.—ಇದಕ್ಕಿಂತ ಸೂಕ್ತವಾದ ಅಧಿಕಾರ ಮತ್ತೊಂದು ಬೇಡ, ನಿಮ್ಮನ್ನು ಪ್ರಶ್ನೆ ಮಾಡತಕ್ಕ ಅಧಿಕಾರವನ್ನು ಜನತೆ ನನಗೆ ಕೊಟ್ಟಿದ್ದಾರೆ. ನಾನು ಕಡೆಯದಾಗಿ ಎಚ್ಚರಿಕೆ ಕೊಡುತ್ತಿದ್ದೇನೆ, ಹರಿಜನ ಮಂತ್ರಿಗಳು ಎಷ್ಟು ಜನ ಇದ್ದಾರೋ ಅಷ್ಟು ಜನರ ಮನೆಗಳ ಮುಂದೆ ಜಾಥಾ ಹೊರಡಿಸಿ, ನಿಮ್ಮ ಮನೆಗಳ ಮುಂದೆ ಪ್ರದರ್ಶನ ನಡೆಸುತ್ತೇನೆ. ಹರಿಜನರಿಗೆ ಆವರ ಹಕ್ಕುಬಾಧ್ಯತೆಗಳು ದೊರಕಿಸಿಕೊಡದಿದ್ದರೆ, ನಾನು ಉಪವಾಸ ಸತ್ಯಾಗ್ರಹ ಕೂತುಕೊಳ್ಳುತ್ತೇನೆ. ಇವತ್ತು ಕಾಲ ಮಿಂಚಿಹೋಗಿದೆ. ಡಾಕ್ಟರ್ ಅಂಬೇಡ್ಕರ್‌ರವರ ಜಯಂತಿ ದಿವಸವೇ ಸತ್ಯಾಗ್ರಹ ಹೂಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಸತ್ಯಾಗ್ರಹ ಮಾಡಿದರೆ ತೆಂಗಿನಕಾಯಿ ಹೊಡೆಸುತ್ತೇನೆ.

ಶ್ರೀ ವೈ. ರಾಮಕೃಷ್ಣ.—ನೀವು ಪೈಸ್ಸಿಗೆ ಹೋಗುತ್ತೀರಿ, ಸ್ಟೇಟ್ ಮೆಂಟ್ ಮಾಡುತ್ತೀರಿ. ಕಳೆದ ೧೫ ದಿವಸದಲ್ಲಿ ಎಷ್ಟು ಕೊಳಚೆ ಪ್ರದೇಶಗಳನ್ನು ಹೊಡೆಸಿದ್ದೀರಿ, ನೀವು ಹೊಡೆಸುವುದಕ್ಕೆ ನಾನು ಅಡ್ಡಿಬರುವುದಿಲ್ಲ, ಆದರೆ, ಆವರಿಗೆ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ ? ದಾಸರಪಳ್ಳಿಯಲ್ಲಿ ಕೊಳಚೆ ಪ್ರದೇಶಗಳನ್ನು ಹೊಡೆಸಿ ಪಾಕಿಸಿದ್ದೀರಿ, ಅಲ್ಲಿ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಕಂಠಯ್ಯ ನವರಿಗೆ ಸೇರಿದ್ದು.

ಶ್ರೀ ವೈ. ರಾಮಕೃಷ್ಣ.—ಆ ಜನ ಬಸವಲಿಂಗಪ್ಪ ನಗರ, ದೇವರಾಜ ಅರಸ್ ನಗರ ಅಂಥ ಹೆಸರು ಇಟ್ಟುಕೊಂಡಿರುತ್ತಾರೆ. ಇಂಥ ಸಮಸ್ಯೆಗಳು ಬಂದಾಗ ನಮ್ಮ ಬಸವಲಿಂಗಪ್ಪನವರು ಏನು ಹೇಳುತ್ತಾರೆಂದು ಕೇಳುತ್ತಾರೆ, ಆದ್ದರಿಂದ ಇಂಥ ವಿಚಾರಗಳು ಬಂದಾಗ ನಿಮ್ಮ ಆಧ್ಯ ಕರ್ತವ್ಯವನ್ನು ಬಡ ಜನಗಳಿಗೆ, ಕೊಳಚೆ ಪ್ರದೇಶದಲ್ಲಿ ವಾಸ ಮಾಡತಕ್ಕ ಜನಗಳಿಗೆ, ಬಡತನದ ರೇಖೆಯಿಂದ ಕೆಳಗಡೆ ಇರತಕ್ಕವರಿಗೆ ಸಹಾಯ ಸೌಕರ್ಯಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ಹಿಂದುಮುಂದು ನೋಡದೆ ಮುಂದಾಗಬೇಕೆಂದು ಹೇಳುತ್ತೇನೆ. ಆ ರೀತಿ ತಾವು ಮುಂದಾಗದಿದ್ದರೆ, ಸ್ವಾರ್ಥಕ್ಕೆ ನಿಮ್ಮ ಹೆಸರನ್ನು ಬಳಸಿಕೊಂಡು, ನಿಮ್ಮ ಹೆಸರಿಗೆ ಮಸಿ ಬಳಿಯುವ ಪ್ರಯತ್ನ ಮಾಡುತ್ತಾರೆಂದು ಹೇಳಿ ನನಗೆ ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ವೈ. ರಾಮಕೃಷ್ಣರವರು ಒಂದು ಮಾತನ್ನು ಹೇಳಿದರು. ಕೇಂದ್ರಸರ್ಕಾರದವರು ಎಷ್ಟು ಬೇಕಾದರೂ ದುಡ್ಡು ಕೊಡುತ್ತಾರೆ. ನೀವು ಕೇಳುವುದಿಲ್ಲವೆಂದು. ಇವತ್ತೇ ಕೇಳುತ್ತೇವೆ, ಪ್ಲಾನಿಂಗ್ ಸ್ಕೀಮ್ ಅಲಾಟ್‌ಮೆಂಟ್‌ಗೆ ಒಳಪಡದಹಾಗೆ ಎಷ್ಟು ಬೇಕಾದರೂ ಕೊಡುತ್ತಾರೆಯೆ ? ಹಾಗೆ ಕೊಟ್ಟರೆ ನೀವು ಏನೇನು ಕೆಲಸ ಹೇಳುತ್ತೀರೋ ಅದನ್ನೆಲ್ಲಾ ಮಾಡಿಸುತ್ತೇವೆ, ಆಗಬಹುದೇನಪ್ಪಾ ?

† ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಸದನದ ಮುಂದೆ ಬಂದಿರತಕ್ಕ ಖಾಸಗೀ ನಿರ್ಣಯ ನನಗೆ ಆಶ್ಚರ್ಯವನ್ನುಂಟುಮಾಡಿದೆ. ಕಾರಣ, ಕೊಳಚೆ ಪ್ರದೇಶದಲ್ಲಿ ವಾಸಮಾಡತಕ್ಕವರಿಗೆ ನಲ್ಲಿ ನೀರು, ದೀಪದ ವ್ಯವಸ್ಥೆಯನ್ನು ಕೊಡಬೇಕು ಎನ್ನುವ ನೀತಿ ಇದರಲ್ಲಿದೆ.

ಶ್ರೀ ವೈ. ರಾಮಕೃಷ್ಣ.—ಗುರುತಿಸಲಾದ ಕೊಳಚೆ ಪ್ರದೇಶಗಳು.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ತಡೆಯಿರಿ ಸ್ವಾಮಿ, ಕೊಳಚೆ ಪ್ರದೇಶಗಳು ಹೇಗೆ ಆಗುತ್ತವೆ. ನಗರಗಳ ಬಗ್ಗೆ ಮೂಲಭೂತವಾಗಿ ಯೋಚನೆ ಮಾಡಿದ್ದಾರೆ, ಪಟ್ಟಣಕ್ಕೆ ಹಳ್ಳಿಗಳಿಂದ ಬರತಕ್ಕ ವಲಸೆ ಬರತಕ್ಕ ಜನಗಳಿಂದ ಹಾಗೂ ಪಕ್ಕದ ರಾಜ್ಯಗಳಿಂದ ವಲಸೆ ಬರತಕ್ಕ ಜನಗಳಿಂದ ಕೊಳಚೆ ಪ್ರದೇಶಗಳು ನಿರ್ಮಾಣವಾಗುತ್ತಿವೆ. ಕೊಳಚೆ ಪ್ರದೇಶಗಳು ಬೆಳೆಯುವ ಜಾಗ ಅದು ಖಾಸಗಿ ಜಮೀನಾಗಿರಬಹುದು, ಸರ್ಕಾರಿ ಜಮೀನಾಗಿರಬಹುದು. ಬೆಂಗಳೂರು ನಗರದಲ್ಲಿ ಖಾಸಗಿಯವರು ಕೊಂಡಿರತಕ್ಕ ಸೈಟಿನಲ್ಲಿ ಬೇರೆ ಜನಗಳು ಬಂದು ಗುಡಿಸಲುಗಳನ್ನು ಹಾಕಿರತಕ್ಕ ನಿದರ್ಶನಗಳು ಇವೆ. ಖಾಸಗೀಯವರು ದುಡ್ಡು ಕೊಟ್ಟು ಪಡೆದಿರತಕ್ಕ ಸೈಟುಗಳಲ್ಲಿರತಕ್ಕ ಕೊಳಚೆವಾಸಿಗಳನ್ನು ಬಿಡಿಸುವುದೇ ಕಷ್ಟವಾಗಿದೆ. ಕಾರಣ, ಅವರ ಹಿಂದೆ ನಮ್ಮಂಥ ರಾಜಕಾರಣಿಗಳ ಬೆಂಬಲ ಇರುತ್ತದೆ. ದುಡ್ಡು ಕೊಟ್ಟು ಸೈಟುಗಳನ್ನು ಕೊಂಡುಕೊಂಡರೂ ಕೂಡ ಪ್ರತಿಫಲ ಇಲ್ಲದಂತಾಗಿದೆ. ಇಂಥ ಒಂದು ಪರಿಸ್ಥಿತಿ ಇರುವಾಗ, ಕೊಳಚೆ ಪ್ರದೇಶಗಳಲ್ಲಿಯೇ ಎಲ್ಲ ಅನುಕೂಲಗಳನ್ನು ಕೊಡಬೇಕೆಂದು ಹೇಳತಕ್ಕಂಥ ಪಾದವನ್ನು ಯಾವ ರೀತಿ ಮುಂದಿಟ್ಟರೋ ತಿಳಿಯುತ್ತಿಲ್ಲ.

ಶ್ರೀ ವೈ. ರಾಮಕೃಷ್ಣ.—ತಾವು ಕೊಳಚೆ ನಿರ್ಮೂಲನ ಮಸೂದೆಯನ್ನು ಓದಿಲ್ಲ ಅಂಥ ಕಾಣುತ್ತದೆ. ದಯವಿಟ್ಟು ಆ ಮಸೂದೆಯನ್ನು ಓದಿ ಭಾಷಣ ಮಾಡಿ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಸೂದೆಯನ್ನು ಓದಿಯೇ ಮಾತನಾಡುತ್ತಿರುವುದು. ಇಲ್ಲಿ ಎರಡು ಪ್ರಶ್ನೆ ಇದೆ, ಡೆಲ್ಲಿ ಡೆವಲಪ್ ಅಥಾರಿಟಿಯಲ್ಲಿ ಇದ್ದಂಥ ಕೊಳಚೆ ಪ್ರದೇಶಗಳನ್ನು ತೆಗೆದು, ಸರಿಯಾದ ರೀತಿಯಲ್ಲಿ ಕಟ್ಟಡಗಳನ್ನು ಕಟ್ಟಿಸಿ, ಕೊಳಚೆ ನಿವಾಸಿಗಳಿಗೆ ಸರಿಯಾದ ವಾಸದ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ. ತಮ್ಮ ನಿರ್ಣಯದ ಪ್ರಕಾರದಂತೆ ಗುಡಿಸಲುಗಳಲ್ಲಿರತಕ್ಕವರಿಗೆ

ಅವರು ಇರತಕ್ಕ ಜಾಗದಲ್ಲಿಯೇ ನೀರು ಮತ್ತು ದೀಪದ ವ್ಯವಸ್ಥೆ ಮಾಡಿ ಎಂದು ಹೇಳುತ್ತಿದ್ದೀರಿ. ಸ್ವಾಮಿ, ನಮ್ಮ ಶಿವಮೊಗ್ಗ ನಗರದಲ್ಲಿಯೂ ಕೂಡ ಕೊಳಚೆ ಪ್ರದೇಶಗಳು ಇವೆ. ಕೆಟ್ಟು ಪಟ್ಟಣ ಸೇರು ಎನ್ನುವ ಗಾದೆಯಂತೆ, ಹಳ್ಳಿಗಳಿಂದ ವಲಸೆ ಬರತಕ್ಕ ಜನಗಳಿಂದ ಈ ಕೊಳಚೆ ಪ್ರದೇಶಗಳು ನಿರ್ಮಾಣ ವಾಗುತ್ತದೆ. ಕೆಲಸ ಕಾರ್ಯಗಳನ್ನು ಅರಸಿಕೊಂಡು ಬಂದಂತ ಜನರು ಖಾಲಿ ಇರತಕ್ಕ ಖಾಸಗೀ ಜಮೀನುಗಳಲ್ಲಿ ಮತ್ತು ಸರ್ಕಾರದ ಜಮೀನುಗಳಲ್ಲಿ ಗುಡಿಸಲುಗಳನ್ನು ಹಾಕಿ ವಾಸಮಾಡಿಕೊಂಡಿರುತ್ತಾರೆ. ಅದನ್ನೇ ಅವರಿಗೆ ರೆಗ್ಯೂಲರೈಸ್ ಮಾಡಬೇಕೆಂದರೆ, ಅದು ಸರಿಯಾದ ವ್ಯವಸ್ಥೆ ಅನ್ನಿಸುವುದಿಲ್ಲ. ಇಂಥ ಜನರಿಗೆ ನಾಗರೀಕ ಸಮಾಜದಲ್ಲಿ ವ್ಯಮಷ್ಠಿತವಾದ ನಾಗರೀಕ ಜೀವನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಯಾವರೀತಿ ಒದಗಿಸಿಕೊಡಬೇಕು ? ಪ್ರತ್ಯೇಕವಾದಂಥ ಸ್ಥಳಗಳನ್ನು ಸರ್ಕಾರ ದವರು ನೀಡಬೇಕು. ಕಾಲೋನಿಗಳನ್ನು ಕಟ್ಟಿಸುವುದರ ಮೂಲಕ ಮಾಡಬೇಕೆಂಬುದೇ ನನ್ನ ವಾದ, ರಾಮಕೃಷ್ಣರವರೇ ? ಕೊಳಚೆ ಪ್ರದೇಶದ ನಿವಾಸಿಗಳಿಗೆ ಬೇರೆ ಸ್ಥಳವನ್ನು ನಿರ್ಮಾಣ ಮಾಡಬೇಕು, ಇವತ್ತು ಬೆಂಗಳೂರು ನಗರದಲ್ಲಿ ಕೊಳಚೆ ಪ್ರದೇಶಗಳಿಂದ ಎಷ್ಟೆಲ್ಲಾ ಸಮಸ್ಯೆಗಳು ಹುಟ್ಟಿಕೊಂಡಿವೆ ಎಂಬುದನ್ನು ಇವತ್ತು ನಾವು ನೋಡುತ್ತಿದ್ದೇವೆ. ಇವತ್ತು ಕೊಳಚೆ ಪ್ರದೇಶಗಳಲ್ಲಿ ಐ.ಪಿ.ಸಿ. ಆಕ್ಟ್ ನಲ್ಲಿರತಕ್ಕಂಥದ್ದು ನಡೆಯುತ್ತಿದೆ. ಇದಕ್ಕೆ ಕಾರಣ, ನಾವು ಅವರಿಗೆ ನಾಗರೀಕ ಜೀವನ ನಡೆಸುವುದಕ್ಕೆ ವ್ಯವಸ್ಥೆ ಮಾಡದೇ ಇರುವುದು. ಅಧ್ಯಕ್ಷರೆ, ಇವೊತ್ತು ನಮ್ಮ ಪಾಲಿಸಿಯಲ್ಲಿ ಎಷ್ಟೋ ತೊಂದರೆ ಇದೆ. ಹರಿಜನರಿಗಾಗಿ ಕಾಲೋನಿಗಳನ್ನು ಕಟ್ಟಿಸಿ ಹರಿಜನರನ್ನು ಮಾತ್ರ ಆಲ್ಲಿಯೇ ಬಿಡುವುದರಿಂದ ನಾವು ಈ ಸಮಸ್ಯೆಯನ್ನು ಹೋಗಲಾಡಿಸಲಿಕ್ಕೆ ಸಾಧ್ಯವೇನು ? ಜನತಾ ಗೃಹ ನಿರ್ಮಾಣ ಮಾಡುವುದರಿಂದ ದೊಡ್ಡ ದೋಷವಾಗುತ್ತದೆ ಅದು ಆಗಬಾರದು. ಬೇರೆ ವಿದ್ಯಾವಂತರು, ಅರಿತಂ ನುರಿತಂತ ಜನಗಳ ಮಧ್ಯೆ ಅವರನ್ನು ಇಡುವ ವ್ಯವಸ್ಥೆ ಮಾಡಿದಾಗ ಸಾಮಾಜಿಕ ಬದಲಾವಣೆಯಾಗುತ್ತದೆಯೇ ಹೊರತು, ಅಲ್ಲಿಯವರೆಗೂ ಸಾಧ್ಯವಿಲ್ಲ.

೧೧-೦೦ ಎ.ಎಂ.

ಶ್ರೀ ಪೈ. ರಾಮಕೃಷ್ಣ.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್ ಅವರು ಸ್ವಲ್ಪ ಯೀಲ್ಡ್ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ಮಾನ್ಯ ಸದಸ್ಯರು ರೈಲ್ವೆ ಕಂಬಿ ಬಿಟ್ಟು ಜೋಗುತ್ತಿದ್ದಾರೆ. ಈಗ ರೆಸಲ್ಯೂಷನ್ ಇರತಕ್ಕದ್ದು ರೆಕಗ್‌ನೈಸ್ಡ್ ಸ್ಲಮ್ಸ್ ಏನು ಇದೆ ಅದರ ಬಗ್ಗೆ ಇದೆ. ಈಗ ಮಾನ್ಯ ಸದಸ್ಯರು ಹೇಳತಕ್ಕದ್ದು ಏನು ಅಂದರೆ ಅವರ ಭಾಷಣದಲ್ಲಿ ಅವುಗಳ ಬುಡಕ್ಕೆ ತರುತ್ತಿದ್ದಾರೆ. ಇವೊತ್ತು ಆಳುವ ಪಕ್ಷ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಮಾಡಿ, ಅದಕ್ಕೆ ಒಬ್ಬರನ್ನು ಚೇರ್‌ಮನ್ ಮಾಡಿ ಸಾಕಷ್ಟು ಹಣ ಒದಗಿಸಿ ಅದನ್ನು ರೆಗ್ಯೂಲರೈಸ್ ಮಾಡಿದ್ದಾರೆ. ಇವೊತ್ತು ಅವರನ್ನೇ ಎತ್ತಿ ಆನ್ನುವ ಮಟ್ಟದಲ್ಲಿ ಮಾತನಾಡುತ್ತಿದ್ದಾರೆ. ಈಗ ಸ್ಲಮ್ ಎಂದು ಯಾವ ಯಾವ ಪ್ರದೇಶಗಳು ರೆಕಗ್‌ನೈಸ್ಡ್ ಆಗಿದೆ ಅದರ ಬಗ್ಗೆ ರೆಸಲ್ಯೂಷನ್ ಇರತಕ್ಕದ್ದು. ಎಲ್ಲಿ ಶಾಶ್ವತವಾಗಿ ಮನೆ ಗಳನ್ನು ಕಟ್ಟಿದ್ದಾರೆ ಅಲ್ಲಿಗೆ ಪೌರಸೌಲಭ್ಯ ಕೊಡಿ ಎಂದು ಕೇಳಿರುವುದು. ಅದು ರೆಸಲ್ಯೂಷನ್‌ನಲ್ಲಿ ಇದೆ. ಅದನ್ನು ಓದುತ್ತೇನೆ, ದಯಮಾಡಿ ಮಾನ್ಯಸದಸ್ಯರು ಕೇಳಬೇಕು.

> "That this Assembly recommends to Government to provide all essential civic amenities to the people residing in Slum areas of Banggalore City since several Years".

ಶ್ರೀ ಎಸ್.ಎಮ್. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ರೆಕಗ್‌ನೈಸ್ಡ್ ಸ್ಲಮ್ಸ್ ಎಂದು ಇದರಲ್ಲಿ ಎಲ್ಲಿದೆ ದಯಮಾಡಿ ನೋಡಿ.

ಶ್ರೀ ಪೈ. ರಾಮಕೃಷ್ಣ.—ಸ್ವಾಮಿ, ತಾವು ಸ್ಲಮ್ ಡೆಪಿನಿಷನ್ಸ್ ನೋಡಿ. ಅದರಲ್ಲಿ ಐದೆಂಟಿ ಫೈಡ್ ಸ್ಲಮ್ಸ್ ಎಂದು ಇದೆ.

ಶ್ರೀ ಎಸ್.ಎಮ್. ಶೀರನಾಳಿ ಚಂದ್ರಶೇಖರ್.—ಸ್ವಾಮಿ ರೆಸಲ್ಯೂಷನ್‌ನಲ್ಲಿ ಎಲ್ಲಿದೆ ?

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ನಿರ್ಣಯ ಮಂಡಿಸಿರತಕ್ಕವನು ನಾನು. ಸ್ಲಮ್‌ಗೆ ಡಿಪನಿಷನ್ ಕೊಟ್ಟಿದ್ದಾರೆ. ಅದನ್ನು ರೆಕಗನೈಸ್ ಮಾಡಿದ್ದಾರೆ. ಎಲ್ಲಿಯೋ ಒಂದು ಪ್ರೈವೇಟ್ ಪ್ರಾಪರಟಿಯಲ್ಲಿ ಇರತಕ್ಕದ್ದಕ್ಕೆ ಸ್ಲಮ್ ಎಂದು ಡಿಕ್ಲೇರ್ ಮಾಡಿಲ್ಲ. ಬಿ.ಡಿ.ಎ. ಅವರು ಕಾರ್ಪೊರೇಷನ್‌ನವರು ಸೇರಿ

ಇಷ್ಟು ಸ್ಲಮ್ಸ್ ಎಂದು ರೆಕಗನೈಸ್ ಮಾಡಿದ್ದಾರೆ. ಕೊಳಚೆ ಪ್ರದೇಶಗಳಿಗೆ ನೂರಾರು ವರ್ಷಗಳಿಂದ ಸೌಲಭ್ಯ ಕೊಟ್ಟಿಲ್ಲ. ಇವೊತ್ತು ಖಾಸಗಿಯವರ ಜಾಗದಲ್ಲಿ ನಾಲ್ಕು ಸೈಟುಗಳು ಇರತಕ್ಕದ್ದಕೆ ನಾವು ಹೇಳುತ್ತಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ನಿಲುವಳಿಯಲ್ಲಿ ರೆಕಗನೈಸ್ಡ್ ಸ್ಲಮ್ಸ್ ಎಂದು ಹಾಕಿದ್ದರೆ ಇಷ್ಟು ಶ್ರಮ ಆಗುತ್ತಿರಲಿಲ್ಲ.

SRI H. GANGADHARAN.—Slum is a word defined in a particular Act and definition is given there.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಇದರಲ್ಲಿ ರೆಕಗನೈಸ್ಡ್ ಸ್ಲಮ್ಸ ಎಂದು ಇರ ಬೇಕಾಗಿತ್ತು. ಅದು ಇಲ್ಲದೇ ಇರುವುದರಿಂದ ಇಷ್ಟು ತೊಂದರೆಯಾಗಿದೆ. ನೋಟಿಫೈಡ್ ಆಗಿರತಕ್ಕ ಸ್ಲಮ್ಸ್ ಇದೆ. ಈಗ ರೆಕಗನೈಸ್ಡ್ ಸ್ಲಮ್ಸ್‌ಗೆ ಎಲ್ಲಾ ಫೆಸಿಲಿಟೀಸ್ ಕೊಡಬೇಕು ಎಂದು ರೆಸಲ್ಯೂಷನ್ ಇದ್ದಿದ್ದರೆ I am the first person to support.

ಶ್ರೀ ಭೀಮಣ್ಣ ಖಂಡ್ರೆ.—ಅದು ವಕೀಲರ ವಾದ.

ಶ್ರೀ ಹೆಚ್. ಗಂಗಾಧರನ್.—ರೆಕಗ್‌ನೈಸ್ಡ್ ಸ್ಲಮ್ಸ್ ಎಂದು ಎಲ್ಲೂ ಇಲ್ಲ.

ಶ್ರೀ ಎಸ್. ಎಮ್. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಈಗ ಮಾನ್ಯ ಸದಸ್ಯರಾದ ರಾವಂಕೃಷ್ಣ ಅವರು ರೆಕಗನೈಸ್ಡ್ ಸ್ಲಮ್ಸ್ ಇದೆ ಎಂದು ಹೇಳಿದರು, ಅದಕ್ಕೋಸರ ನಾನು ಹೇಳುತ್ತಿದ್ದೇನೆ. ಸ್ಲಮ್ಸ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿರತಕ್ಕ ಹಣ ಸದ್ವಿನಿಯೋಗವಾಗದೇ ಹಾಗೆ ಹೋಗಿದ್ದರೆ ಅದೂ ಕೂಡ ತಪ್ಪು ಅದನ್ನು ವಿರೋಧಿಸಬೇಕಾಗುತ್ತದೆ. ಈಗ ತಮ್ಮ ರೆಸಲ್ಯೂಷನ್‌ನಲ್ಲಿ ರೆಕಗ್‌ನೈಸ್ಡ್ ಸ್ಲಮ್ಸ್ ಎಂದು ಇಲ್ಲದೇ ಹೋಗಿದ್ದರಿಂದ ಇಷ್ಟು ಮಾತನಾಡಬೇಕಾಯಿತು. ಇವೊತ್ತು ರೆಕಗ್‌ನೈಸ್ಡ್ ಸ್ಲಮ್ಸ್‌ಗೆ ಎಲ್ಲಾ ನಾಗರೀಕ ಸವಲತ್ತುಗಳನ್ನು ಕೊಡಬೇಕು ಎಂದು ಹೇಳುವುದರಲ್ಲಿ ಯಾರೂ ವಿರೋಧ ಮಾಡುವುದಿಲ್ಲ. ಎಲ್ಲರೂ ಸಂಪೂರ್ಣವಾಗಿ ಬೆಂಬಲಿಸಬೇಕಾದ್ದು ಇದೆ. ಆದರೆ ಇವೊತ್ತು ಮಾನ್ಯ ಸದಸ್ಯರು ತಂದಿರತಕ್ಕಂತಹ ನಿಲುವಳಿ ಸೂಚನೆಯನ್ನು ನಾನು ವಿರೋಧಿಸಿ, ಅಧ್ಯಕ್ಷರು ನನಗೆ ಇಷ್ಟು ಕಾಲ ಮಾತ ನಾಡಲು ಅವಕಾಶ ಕೊಟ್ಟಿದ್ದಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ).—ಸನ್ಮಾನ್ಯ ಸಭಾಧ್ಯಕ್ಷರೆ, ಅನೇಕ ದಿವಸಗಳಿಂದ ಈ ಕೊಳಚೆ ಪ್ರದೇಶಗಳ ನೈರ್ಮಲೀಕರಣದ ಬಗ್ಗೆ ಈ ಸಭೆ ಸಾಕಷ್ಟು ಚರ್ಚೆ ನಡೆಸಿರುವುದು ಎಲ್ಲರಿಗೂ ಗೊತ್ತಿದೆ. ಈಗ ಬೆಂಗಳೂರಿನಲ್ಲಿ ನನ್ನ ಅಂದಾಜಿನಲ್ಲಿ ಇರುವ ಹಾಗೆ ಸುಮಾರು ೪೦೦ ಕೊಳಚೆ ಪ್ರದೇಶಗಳು ಇವೆ. ಅದರಲ್ಲಿ ರೆಕಗ್‌ನೈಸ್ಡ್ ಸ್ಲಮ್ಸ್ ೧೮೦-೨೦೦ ಇದೆ. ಇದು ಬಹಳ ದಿವಸದಿಂದಲೂ ಇದೆ. ಆದರೆ ಹೊಸದಾಗಿ ಅಕ್ರಮವಾಗಿ ಈಚೆಗೆ ಕಟ್ಟಿರತಕ್ಕದ್ದು ಸುಮಾರು ೨೦೦ ಸ್ಲಮ್ಸ್ ಇದೆ ಈ ಸ್ಲಮ್ಸ್ ಕೆಲವು ಕಾರ್ಪೂರೇಷನ್ ಆಡಳಿತದಲ್ಲಿ ಇದೆ, ಮತ್ತೆ ಕೆಲವು ಬಿ ಡಿ.ಎ. ಅವರ ಆಡಳಿತದಲ್ಲಿ ಇದೆ. ಮತ್ತೆ ಕೆಲವು ಸ್ಲಮ್ಸ್ ಕ್ಲಿಯರೆನ್ಸ್ ಬೋರ್ಡ್‌ನಲ್ಲಿ ಇದೆ. ಒಟ್ಟು ನನ್ನ ರಫ್ ಕ್ಯಾಲುಕ್ಯುಲೇಷನ್ ಪ್ರಕಾರ ಸುಮಾರು ೬೦ ಸಾವಿರ ಸಂಸಾರಗಳು ಇರಬಹುದು ಎಂದು ಲೆಕ್ಕ ಹಾಕಿದ್ದೇನೆ. ಐಡೆಂಟಿಫೈಡ್ ಸ್ಲಮ್ಸ್ ಸುಮಾರು ೪೦ ಸಾವಿರ ಮತ್ತು ಹೊಸದಾಗಿ ಹಾಕಿರತಕ್ಕದ್ದರಲ್ಲಿ ಸುಮಾರು ೩೦-೩೫ ಸಾವಿರ ಕುಟುಂಬಗಳು ಇವೆ. ಸ್ಲಮ್‌ನಲ್ಲಿರತಕ್ಕಂತಹ ಜನಸಂಖ್ಯೆ ೨ ಲಕ್ಷ ೫೦ ಸಾವಿರಕ್ಕಿಂತಲೂ ಸ್ವಲ್ಪ ಜಾಸ್ತಿಯಾಗುತ್ತದೆಂದು ನನ್ನ ಒಂದು ಅಂದಾಜು. ಇದರ ಬಗ್ಗೆ ಕೆಲವು ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಹೇಳಿದರೆ, ಮೊದಲನೆ-ಯದಾಗಿ ಹೊಸ ಕೊಳಚೆ ಪ್ರದೇಶಗಳು ಬರದ ಹಾಗೇ ತಡೆಗಟ್ಟುವುದು ಒಂದು ಅಂಶ. ಇನ್ನು ಕೊಳಚೆ ಪ್ರದೇಶಗಳನ್ನು ಸರಿಪಡಿಸಬೇಕಾದರೆ ಇದಕ್ಕೆ ಹಣ ಎಷ್ಟು ಬೇಕಾಗುತ್ತದೆ ಅಷ್ಟು ಒದಗಿಸಬೇಕು. ಈ ಸ್ಲಮ್ ಬಗ್ಗೆ ಮುಖ್ಯವಾದ ವಿಚಾರವೇನೆಂದರೆ ಇದರಲ್ಲಿ ಎರಡು ವಾದ ಇದೆ. ಮೊದಲನೆಯದು ಅವರು ಇರತಕ್ಕ ಜಾಗದಲ್ಲೇ ಅವರಿಗೆ ವಸತಿ ಒದಗಿಸಿಕೊಡಬೇಕಾದರೆ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಆಗಬೇಕು ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಇದೆ. ಬಡವರಿಗೆ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕಟ್ಟಿ ಕೊಟ್ಟರೆ ಅನುಕೂ ಲವಾಗುವುದಿಲ್ಲ. ಇಂಡಿವಿಜುವಲ್ ಹಟ್ಸ್ ಕೊಡಬೇಕೆಂದು ಮತ್ತೊಂದು ಇದೆ. ಈಗ ಮುಖ್ಯವಾಗಿ ನಮ್ಮ ಸ್ನೇಹಿತರಾದ ರಾವಕೃಷ್ಣ ಅವರು ಹೇಳಿದ ಹಾಗೆ ಸ್ಲಮ್ಸ್ ಮತ್ತು ರಾಜಕೀಯಕ್ಕೂ ಕೂಡ ಬಹಳ ನಿಕಟವಾದ ಸಂಬಂಧ ಇದೆ. ಈ ಓಟು ಬರತಕ್ಕ ಸಂದರ್ಭದಲ್ಲಿ ಮುಖಂಡರು ವಿರೋಧಪಕ್ಷದವರು

ಇಲ್ಲಹುದು ಅಥವಾ ಆಡಳಿತ ಪಕ್ಷದವರು ಇರಬಹುದು ತಮ್ಮ ಓಟು ಗಳಿಕೆಯಿಂದ ಆಶ್ವಾಸನೆ ಕೊಟ್ಟು ಪುನಃ ಮತ್ತೊಂದು ಸಾರಿ ಓಟಿಗೆ ಬರುವವರೆಗೂ ಆ ಸಮಸ್ಯೆ ಹಾಗೆ ಮುರೆಯತಕ್ಕದ್ದು ಶೋಚನೀಯವಾದ ಸಮಾಚಾರ. ಈ ಹೊಸ ಸ್ಲಂಗಳು ಬರುವುದನ್ನು ತಡೆಗಟ್ಟಬೇಕೇ ಹೊರತೆ ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ನಾವು ಬಗೆಹರಿಸುವುದಕ್ಕಾಗುವುದಿಲ್ಲ. ಕಳೆದ ೭-೮ ತಿಂಗಳುಗಳಲ್ಲಿ ನನ್ನ ಬಡಾವಣೆಯಲ್ಲಿ ಸುಮಾರು ೩೦-೩೫ ಹೊಸ ಸ್ಲಮ್ಸ್ ಬಂದಿವೆ. ಹೀಗೆ ಸ್ಲಂಗಳು ಬೆಳೆಯುತ್ತಾ ಹೋದರೆ ಮುಂದೆ ಪರಿಸ್ಥಿತಿ ಕಷ್ಟಕ್ಕೆ ಇಟ್ಟುಕೊಳ್ಳುತ್ತದೆ. ಸಾಮಾನ್ಯವಾಗಿ ಕೆಲವರಿಗೆ ಮನೆಗಳು ಸಿಕ್ಕದೇ ಎಲ್ಲಾದರೂ ಒಂದಿಷ್ಟು ಜಾಗ ಸಿಕ್ಕಿದರೆ ಅಲೇ ಗುಡಿಸಲುಗಳನ್ನು ಕಟ್ಟಿಕೊಳ್ಳೋಣ ಎಂದು ಇರುತ್ತಾರೆ. ಅಂಥವರು ಖಾಲಿ ಜಾಗವನ್ನು ಕಂಡಕೂಡಲೇ ಗುಡಿಸಲು ಕಟ್ಟಿಕೊಳ್ಳುತ್ತಾರೆ. ಇನ್ನು ಕೆಲವರು ರಾಜಕಾರಣಿಗಳು, ಪುಢಾರಿಗಳು ಇದೇ ಸಮಯವೆಂದು ತಿಳಿದು ನಮಗೆ ಮಂತ್ರಿಗಳು ಗೊತ್ತು, ವಿಧಾನಸಭಾ ಸದಸ್ಯರು ಗೊತ್ತು, ನೀವು ಇಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳಿ, ಆನಂತರ ಈ ಜಾಗವನ್ನು ನಿಮಗೇ ಅಲಾಟ್ ಮಾಡಿಸುವಂತೆ ಮಾಡುತ್ತೇವೆಂದು ಆ ಬಡವರಿಂದ ಒಂದೂಂದು ಗುಡಿಸಲಿಗೆ ೨೦೦-೩೦೦ ರೂಪಾಯಿಗಳನ್ನು ಕಿತ್ತುಕೊಂಡು ತಮ್ಮ ಕಿಸೆಗೆ ಹಾಕಿಕೊಳ್ಳುತ್ತಾರೆ. ಈ ರೀತಿಯಲ್ಲಿ ಬಡಜನರು ದುಡ್ಡುಕೊಟ್ಟು ಕಟ್ಟಿಕೊಂಡ ಗುಡಿಸಲುಗಳನ್ನು ಕಿತ್ತುಹಾಕಿದರೆ ಯಾರಿಗಾದರೂ ಹೊಟ್ಟೆ ಉರಿಯುತ್ತದೆ. ಆದ್ದರಿಂದ ಈ ರಾಜಕಾರಣಿಗಳು ಹಾಗೂ ಪುಢಾರಿಗಳು ಇಂಥ ಕೃತ್ಯಗಳಿಗೆ ಕೈ ಹಾಕುವುದನ್ನು ಮೊದಲು ತಪ್ಪಿಸಬೇಕು. ಇತ್ತೀಚೆಗೆ ನಮ್ಮ ಏರಿಯಾದಲ್ಲಿ ಹೊಸದಾಗಿ ಸ್ಮಶಾನದಲ್ಲಿ ಹುಟ್ಟಿಕೊಂಡಿದ್ದ ಸ್ಲಂನ್ನು ನಾಶಪಡಿಸಿದರು. ಇವತ್ತು ರೆಕಗ್ನೈಸ್ಡ್ ಸ್ಲಂಗಳನ್ನು ಸರಿಪಡಿಸಬೇಕಾದರೆ ಕನಿಷ್ಟ ೫೦ ಕೋಟಿ ರೂಪಾಯಿಗಳಾದರೂ ಬೇಕಾಗುತ್ತದೆ. ಪ್ರತಿ ವರ್ಷವೂ ೫೦-೬೦ ಸ್ಲಂಗಳು ಹೊಸದಾಗಿ ಬರುತ್ತಿರುವುದರಿಂದ ಈ ಬಗ್ಗೆ ಒಂದು ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಕೆಲಸ ಮಾಡದೇ ಹೋದರೆ ನಾನು ಮೊದಲೇ ಹೇಳಿದಂತೆ ಈ ಸಮಸ್ಯೆಯನ್ನು ನಾವು ಬಗೆಹರಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಈಗ್ಗೆ ಸುಮಾರು ೭-೮ ವರ್ಷಗಳ ಕೆಳಗೆ ಬೆಂಗಳೂರು ನಗರಸಭೆಯವರೂ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಸ್ಥೆಯವರೂ ಸೇರಿಕೊಂಡು ಈ ರೆಕಗ್ನೈಸ್ಡ್ ಸ್ಲಂಗಳಿಗೆ ಹೋಗಿ ಅಲ್ಲಿರತಕ್ಕ ಗುಡಿಸಲುಗಳು ಎಷ್ಟು? ಅಲ್ಲಿ ಎಷ್ಟು ಜನರಿದ್ದಾರೆ? ಎಂಬುದನ್ನು ಸರ್ವೇ ಮಾಡಿ, ಆ ಜನಗಳ ಭಾವಚಿತ್ರಗಳನ್ನು ತೆಗೆದುಕೊಂಡು ಶೇಖರಿಸಿಟ್ಟಿದ್ದಾರೆ. ಈ ಸ್ಲಂಗಳಲ್ಲಿ ಬಹಳ ಅತಿ ಮುಖ್ಯವಾದುವು ಎಂದರೆ, ವಿನೋಬಾ ನಗರ, ಮೈಸೂರು ರಸ್ತೆ, ಬಾಬಾ ಗುಡಿಸಲುಗಳು. ನಮ್ಮ ಬೆಂಗಳೂರಿನಲ್ಲಿ ಜಯಚಾಮರಾಜೇಂದ್ರ ರಸ್ತೆಯಲ್ಲಿರುವ ವ್ಯಾಯಾಮಶಾಲೆಯ ಹಿಂದೆ ಇರತಕ್ಕ ಕೊಳಚೆ ಪ್ರದೇಶ ಬಹಳ ವರ್ಷಗಳ ಹಿಂದಿನಿಂದಲೂ ಇದೆ. ಇದೇ ಅಲ್ಲದೇ ಇನ್ನೂ ಕೆಲವು ಮುಖ್ಯವಾದ ಕೊಳಚೆ ಪ್ರದೇಶಗಳ ನಿರ್ಮೂಲನಕ್ಕೆ ಪ್ರಯತ್ನ ಮಾಡದೇ ಹೋದರೆ, ಮುಂದೆ ಬಹಳ ಕಷ್ಟವಾಗುತ್ತದೆ. ಇವತ್ತು ತೆಂಗಿನ ಗರಿಯಿಂದ ಕಟ್ಟಿರುವ ಗುಡಿಸಲುಗಳಿಗೆ ನಾವು ಬೆಲೆ ಕಟ್ಟುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಆ ಗುಡಿಸುಲುಗಳಿಗೆ ಆಸ್‌ಬೆಸ್ಟೊ ಷೀಟ್ಸ್ ಹಾಕಿಕೊಡಬೇಕೆಂದು ಹೇಳಬಯಸುತ್ತೇನೆ. ಈಗ ಮದ್ರಾಸ್ ಹಾಗೂ ಖಾನಾಪುರದಲ್ಲಿರುವಂತೆ ಹಾಲಿ ಇರತಕ್ಕ ಸ್ಲಂಗಳಿಗೆ ಬೇರೆ ಜಾಗದಲ್ಲಿ ಬದಲಿ ವ್ಯವಸ್ಥೆ ಮಾಡಿ ಹಳೆಯ ಸ್ಲಂಗಳನ್ನು ಬುಲ್ಡೋಜರ್‌ಗಳಿಂದ ನಾಶಪಡಿಸುವುದು ಸೂಕ್ತ. ನಮ್ಮ ಬೆಂಗಳೂರು ನಗರದಲ್ಲಿ ರತಕ್ಕ ಕೊಳಚೆ ಪ್ರದೇಶಗಳ ನಿರ್ಮೂಲನಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಈಗಾಗಲೇ ಸುಮಾರು ೩ ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಈ ಯೋಜನೆ ಯಾವರೀತಿ ಇದೆ ಎಂದರೆ ಕಲಾಸಿ ಪಾಳ್ಯಂನಲ್ಲಿರತಕ್ಕ ಸ್ಲಂನ್ನು ಜಯನಗರಕ್ಕೂ, ಬಸವನಗುಡಿ ರಸ್ತೆಯಲ್ಲಿರತಕ್ಕ ಸ್ಲಂನ್ನು ಬನಶಂಕರಿಗೂ ವರ್ಗಾಯಿಸಿರುವುದಾಗಿಯೇ ಹೊರತು ಯಾವುದೇ ರೀತಿಯು ಶುದ್ಧವಾದ ಕೆಲಸವನ್ನು ಮಾಡಿಲ್ಲ. ಆದ್ದರಿಂದ ಈ ಸ್ಲಂಗಳನ್ನು ಯಾವರೀತಿ ನಿರ್ಮೂಲ ಮಾಡಬೇಕೆಂಬ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಚುನಾವಣಾ ಸಂದರ್ಭದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಕೃಪೆಯಿಂದ ಸುಮಾರು ೧ ಕೋಟಿ ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಎನ್‌ವೈರ್ನಮೆಂಟಲ್ ಇಂಪ್ರೂವ್‌ಮೆಂಟ್ ಎಂದು ಮಾಡಿದರು. ಇದಕ್ಕಾಗಿ ಸುಮಾರು ೧ ಕೋಟಿ ೨೦ ಲಕ್ಷ ರೂಪಾಯಿಗಳು ಖರ್ಚಾಗಿರಬಹುದು. ಇದೂ ಕೂಡ ಅವಸರವಸರವಾಗಿ ನಡೆದಿರುವ ಕೆಲಸ, ಈ ಸ್ಲಂಗಳಲ್ಲಿ ಕಕ್ಕಸುಗಳನ್ನು ಕಟ್ಟಿಸುವ ಸಲುವಾಗಿ ಸುಮಾರು ೫೦-೪೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಆದರೂ ಅಲ್ಲಿ ಹೇಳಲಾರದಷ್ಟು ಹೊಲಸಾಗಿದೆ. ಈ ಕೊಳಚೆ ಪ್ರದೇಶದ ಜನಗಳಿಗೆ ಒಳ್ಳೆಯ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕೆಂದು ಮಾನ್ಯ ಬಸವಲಿಂಗಪ್ಪನವರು ಗ್ಲೋಸ್ಡ್ ಟೈಲ್ಸ್ ಹಾಕಿ ಕಟ್ಟಿಸಿಕೊಟ್ಟರು. ಆದರೆ ಇವತ್ತು

ಆ ಕಕ್ಕಸುಗಳಲ್ಲಿ ಬಾಗಿಲುಗಳೇ ಇಲ್ಲ, ನೀರು ಇಲ್ಲ, ಅವುಗಳ ಒಳಗಡೆ ಯಾರಾದರೂ ತಲೆ ಹಾಕಿ ನೋಡಿದರೆ ನಾವು ಏತಕ್ಕಾಗಿ ಈ ನರಕಕ್ಕೆ ಬಂದೆವೋ ಎಂದು ಅನಿಸುತ್ತದೆ. ಎಲ್ಲೋ ಕೆಲವು ಕಡೆಗಳಲ್ಲಿ ಅಲ್ಪಸ್ವಲ್ಪ ದೀಪ, ನೀರು ಇದೆ. ಆದ್ದರಿಂದ ನಾನು ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಇಂಥ ತೀವ್ರ ಕೆಲಸಗಳನ್ನು ಮಾಡುವುದನ್ನು ನಿಲ್ಲಿಸಿದರೆ ಸರ್ಕಾರಕ್ಕೆ ಹಣವಾದರೂ ಉಳಿಯುತ್ತದೆ. ಸ್ಲಂಗಳಲ್ಲಿ ವಾಸಿಸುವವರಿಗೆ ಹೇಗಾದರು ಮಾಡಿ ಬೇರೆ ಕಡೆ ಜಾಗವನ್ನು ಕೊಟ್ಟೇ ಕೊಡುತ್ತಾರೆಂಬ ಮನೋಭಾವನೆ ಈ ಜನಗಳಲ್ಲಿ ಬೇರೂರಿ ಬಂದಿದೆ. ಈ ಒಂದು ಮನೋಭಾವನೆ ಜನಗಳಲ್ಲಿ ಹೋಗುವವರೆಗೂ ಈ ಸ್ಲಂಗಳ ನಿರ್ಮೂಲನ ನಿಲ್ಲುವುದಿಲ್ಲ. ಆದ್ದರಿಂದ ನಾನು ಈ ಸದನದ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ, ಈ ಅನಧಿಕೃತ ಸ್ಲಂಗಳನ್ನು ದಯಾದಾಕ್ಷಿಣ್ಯವಿಲ್ಲದೆ ತೆಗೆಯಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಇಲ್ಲಿ ಒಂದು ಮಾತು ಹೇಳುವುದಾದರೆ, ಈ ಸ್ಲಂಗಳು ಕೆಲವು ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಸ್ಥೆಯವರು ಅಲಾಟ್ ಮಾಡಿರುವ ನಿವೇಶನಗಳು ಬಂದಿವೆ. ಇನ್ನು ಕೆಲವು ಸಿವಿಕ್ ಅಮಿನಿಟೀಸ್‌ಗೋಸ್ಕರ ನಗರಸಭೆಯವರು ಬಿಟ್ಟಿರತಕ್ಕ ಜಾಗಗಳಲ್ಲಿ ಬಂದಿವೆ, ಇನ್ನೂ ಕೆಲವರು ತಮಗೆ ಈ ಜಾಗದ ಹಕ್ಕು ಬರಲಿ ಎಂದು ೪ ಗೋಡೆಗಳನ್ನು ಕಟ್ಟಿ ಮೇಲೆ ಛಾವಣಿ ಹಾಕಿ ಹಾಗೆಯೇ ಬಿಟ್ಟಿದ್ದಾರೆ. ಅಲ್ಲಿ ಯಾರೂ ವಾಸ ಇಲ್ಲ. ನಾನು ಈಗ್ಗೆ ಕೆಲವು ದಿವಸಗಳ ಹಿಂದೆ ಬಿ.ಡಿ.ಎ. ಛೇರ್ಮನ್‌ರವರಾದ ಶ್ರೀಮಾನ್ ಸೋಮಣ್ಣನವರೂ ಹಾಗೂ ನಾನು ಕೆಲವು ಅನಧಿಕೃತ ಸ್ಲಂಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೆವು. ಶ್ರೀ ಸೋಮಣ್ಣನವರು ಬಹಳ ಧೈರ್ಯ ಮಾಡಿ ಆ ಕೊಳಚೆ ಪ್ರದೇಶಗಳನ್ನು ತೆಗೆಸಿದ್ದಾರೆ. ಇದೇ ಅಲ್ಲದೇ ಮಾನ್ಯ ಮುಖ್ಯ ಮಂತ್ರಿಯವರೂ ಕೂಡ ಅನೇಕ ಕಡೆಗಳಲ್ಲಿ ಮಾತನಾಡುವಾಗ ಹೊಸದಾಗಿ ಬಂದಿರತಕ್ಕ ಹಾಗೂ ಬರತಕ್ಕ ಅಕ್ರಮ ಕೊಳಚೆ ಪ್ರದೇಶಗಳಿಗೆ ಯಾವುದೇ ರೀತಿಯ ಸಹಾಯ ಸಹಕಾರ್ಯಗಳನ್ನೂ ಕೊಡಂವುದಿಲ್ಲ, ಅಲ್ಲದೆ ಆ ಜನಗಳ ಮೇಲೆ ಕ್ರಮ ಕೂಡ ತೆಗೆದುಕೊಳ್ಳಲಾಗುತ್ತವೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಯವರಿಗೆ ನನ್ನ ವಂದನೆಗಳನ್ನು ಸಲ್ಲಿಸಬಯಸುತ್ತೇನೆ. ಪ್ರತಿಯೊಬ್ಬ ಬಡವನಿಗೂ ಮನೆ ಇರಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಸರ್ಕಾರದವರು ಈ ದಿಸೆಯಲ್ಲಿ ಕ್ರಮ ತೆಗೆದುಕೊಂಡು ಬಡವರಿಗೆ ನಿವೇಶನ ಕೊಡಲಿ, ಅಥವಾ ಕಡಿಮೆ ವೆಚ್ಚದಲ್ಲಿ ಮನೆಗಳನ್ನು ಕಟ್ಟಿಸಿಕೊಡಲಿ, ಅದನ್ನು ಬೇಡವೆಂದು ನಾನು ಹೇಳುವುದಿಲ್ಲ. ಆದರೆ ಜನಗಳು ತಮಗೆ ಇಷ್ಟ ಬಂದಂತೆ ಸ್ವೇಚ್ಛೆಯಾಗಿ ಮನೆಗಳನ್ನು ಗುಡಿಸಲುಗಳನ್ನು ಕಟ್ಟಿಕೊಳ್ಳಲು ಸರ್ಕಾರದವರು ಅವಕಾಶ ಕೊಡಬಾರದು. ಒಂದು ವೇಳೆ ಅವರು ಗುಡಿಸಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ನಾಳೆ ಕಬ್ಬನ್ ಪಾರ್ಕ್‌ನಲ್ಲೂ ಬಂದು ಕಟ್ಟಿಕೊಳ್ಳುತ್ತಾರೆ. ಜಯಚಾಮರಾಜೇಂದ್ರ ರಸ್ತೆಯಲ್ಲಿರುವ ಆಸ್ಪತ್ರೆಯ ಬಳಿ ಹಿಂದೆ ಕೇವಲ ೪-೫ ಗುಡಿಸಲು ಇದ್ದುದು ಇವತ್ತು ಸುಮಾರು ೧೦೦-೧೨೦ ಗುಡಿಸಲುಗಳಾಗಿವೆ. ಜಯಚಾಮರಾಜೇಂದ್ರ ರೋಡಿನಲ್ಲಿದ್ದಂಥ ಸ್ಲಮ್‌ಗಳನ್ನು ತೆಗೆದು ಬನಶಂಕರಿಯಲ್ಲಿ ಸಹಸ್ರಾರು ಸೈಟುಗಳನ್ನು ಮಾಡಿ ಹಂಚಿದರು. ಹಾಗೆಯೇ ವಿಜಯಕಾಲೇಜ್ ಪಕ್ಕದಲ್ಲಿದ್ದಂಥ ಸ್ಲಮ್‌ಗಳನ್ನು ಮೂರುಸಾರಿ ಸೈಟುಗಳನ್ನು ಮಾಡಿ ಕೊಟ್ಟರು, ಆದರೂ ಅವರು ಹೋಗಲಿಲ್ಲ, ಮತ್ತು ಕೊಟ್ಟಂಥ ಸೈಟುಗಳನ್ನು ಮಾರಿಕೊಂಡರು ಈ ರೀತಿಯಾದ ಕ್ರಮವನ್ನು ಅನುಸರಿಸುತ್ತಿದ್ದರೆ ಸ್ಲಮ್ಸ್‌ಗಳನ್ನು ನಿರ್ಮೂಲ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಈಗ ಏನಾಗಿದೆ ಎಂದರೆ ಎಲ್ಲೆಲ್ಲಿ ಜಾಗವಿರುತ್ತದೆ ಅಲ್ಲೆಲ್ಲ ಅಕ್ರಮಿಸಿಕೊಂಡು ಗುಡಿಸಲುಗಳನ್ನು ಕಟ್ಟಿಕೊಂಡಿರುತ್ತಾರೆ, ಒಬ್ಬ ಗುಡಿಸಲು ಹಾಕಿಕೊಂಡಿದ್ದರೆ ಅದರ ಪಕ್ಕದಲ್ಲಿಯೇ ಅವನ ಅಣ್ಣನಿಗೋ ತಮ್ಮನಿಗೋ ಜಾಗಕೊಟ್ಟು ಗುಡಿಸಲು ಹಾಕಿಕೊಂಡಿರುತ್ತಾರೆ. ಈ ರೀತಿ ಜಾಗವನ್ನು ಅಕ್ರಮಿಸಿಕೊಂಡಿರತಕ್ಕಂಥವರೆಲ್ಲರಿಗೂ ವಸತಿ ಸೌಕರ್ಯಗಳನ್ನು ಕಲ್ಪಿಸಲು ಸಾಧ್ಯವಾಗುವುದಿಲ್ಲ ಮಾರ್ಕೆಟ್‌ನಲ್ಲಿ ಕೆಲಸಮಾಡತಕ್ಕಂಥವರಿಗೆ ಸಿಟಿಯಲ್ಲಿ ಕೆಲಸ ಮಾಡಿಕೊಂಡಿರತಕ್ಕಂಥವರಿಗೆ ಕೆಲಸಕ್ಕೆ ಹೋಗಿ ಬರಲು ದೂರವಾಗುತ್ತದೆ ತೊಂದರೆಯಾಗುತ್ತದೆನ್ನುವುದೇನೋ ನಿಜವಿರುತ್ತದೆ. ಆದ್ದರಿಂದ ಅವರಿಗೆ ಅನುಕೂಲ ಮಾಡಿ ಕೊಡಬೇಕೆಂದು ತೀರ್ಮಾನ ತೆಗೆದುಕೊಳ್ಳುವುದಾದರೆ ಮಲ್ಟಿಸ್ಟೋರೀಡ್ ಬಿಲ್ಡ್‌ಂಗ್ ಕಟ್ಟಿ ಎಲ್ಲರಿಗೂ ವಸತಿ ಕಲ್ಪಿಸುವಂತೆ ಮಾಡಬೇಕು.ಇಲ್ಲವಾದರೆ ಬೇರೆ ಬೇರೆ ಪ್ರತ್ಯೇಕವಾಗಿ ಮನೆಗಳನ್ನು ಕಟ್ಟಿಕೊಡಬೇಕು ಎನ್ನುವ ಯೋಜನೆಯನ್ನು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಈ ಸಣ್ಣ ಸಣ್ಣ ಮನೆಗಳು ಇರುವ ಕಡೆ ಕೊಳಚೆ ಪ್ರದೇಶಗಳು ಹುಟ್ಟಿಕೊಳ್ಳುತ್ತದೆ. ಈ ಕೊಳಚೇ ಪ್ರದೇಶಗಳಲ್ಲಿರುವ ಸಮಸ್ಯೆ ಎಂದರೆ ಕಕ್ಕಸ್ಸು, ಇಲ್ಲಿ ವಾಸಮಾಡತಕ್ಕಂಥ ಜನರು ಬೆಳಿಗ್ಗೆ ಮತ್ತು ಸಾಯಂಕಾಲದ ಕೆಲಸಗಳನ್ನು ಪೂರೈಸಿಕೊಳ್ಳಲು ಅಲ್ಲೆಲ್ಲ ಇದ್ದ ಮೈದಾನಗಳಲ್ಲಿ ಹೋಗು

ತ್ತಿದರು ಆದರೆ ಆ ಮೈದಾನಪ್ರದೇಶಗಳಲ್ಲಿ ಮನೆಗಳು ಬಂದಿರುವುದರಿಂದ ಅವರಿಗೆ ಜಾಗವಿಲ್ಲದೆ ಅವರ ಪರಿಸ್ಥಿತಿ ನಿಜವಾಗಿಯೂ ಬಹಳ ಶೋಚನೀಯವಾಗಿದೆ. ರಾತ್ರಿಹೊತ್ತು ಕಳ್ಳತನದಿಂದ ಮೋರಿಗಳಲ್ಲಿ ಕುಳಿತುಕೊಂಡು ತಮ್ಮ ದಿನಚರಿಯನ್ನು ಮುಂಗಿಸಿಕೊಳ್ಳುತ್ತಾರೆ. ಇದನ್ನು ನೋಡಿದರೆ ನಿಜವಾಗಿಯೂ ತಲೆತಗ್ಗಿಸಬೇಕಾದ ಪ್ರಸಂಗವಾಗಿರುತ್ತದೆ.ಆದರಲ್ಲೂಕೂಡ ಪೂನ ಕಡೆಯಿಂದ ಬರತಕ್ಕಂಥ ರೈಲು ದಾರಿಯ ಪಕ್ಕದಲ್ಲಿ ಸುತ್ತಮುತ್ತಲೂ ಬೆಳ್ಳಿಗೆ,ಸಾಯಂಕಾಲದ ಹೊತ್ತು ಈರೀತಿಯ ಒಂದು ದೃಷ್ಯ ಇಂಥನಗರದಲ್ಲಿ ಒಂದು ವಿಚಿತ್ರವಾಗಿರುತ್ತದೆ. ಆದ್ದರಿಂದ ಕೊಳಚೆ ಪ್ರದೇಶಗಳಿಗೆ ಮುಖ್ಯವಾಗಿ ಬೇಕಾಗಿರತಕ್ಕಂಥದ್ದು ಎಂದರೆ ಕಕ್ಕಸ್ಸು. ಆದ್ದರಿಂದ ಈ ಕಕ್ಕಸ್ಸುಗಳನ್ನು ಕಟ್ಟಿಸುವತ್ತ ಹೆಚ್ಚಿನ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ಈ ಕಕ ಸ್ಸುಗಳನ್ನು ಕಟ್ಟಿಸುವುದಕ್ಕೆ ಎಷ್ಟೋ ದುಡ್ಡನ್ನು ಖರ್ಚು ಮಾಡಿ ಕಟ್ಟಿಸಿರುತ್ತೀರಿ, ಇದರ ಬಗ್ಗೆ ಪದೆಪದೇ ಹೇಳುತ್ತಲೇ ಇರುತ್ತೇವೆ. ಇವುಗಳನ್ನು ಕಟ್ಟಿಸುವಾಗ ಮನೆ ಪಕ್ಕದಲ್ಲಿಯೇ ಒಂದೊಂದು ಸಣ್ಣ ಸಣ ಕಕ್ಕಸ್ಸುಗಳನ್ನು ಕಟ್ಟಿಸಿಕೊಟ್ಟರೆ ಬಹಳ ಉತ್ತಮವಾಗಿರುತ್ತದೆ. ಏತಕ್ಕೆಂದರೆ ಕಾಮನ್ ಆಗಿ ಕಕ್ಕಸ್ಸುಗಳನ್ನು ಕಟ್ಟಿಸಿ ಬಿಟ್ಟರೆ ಅದಕ್ಕೆ ಒಂದು ಜವಾಬ್ದಾರಿ ಇರುವುದಿಲ್ಲ. ಸ್ವಚ್ಛವಾಗಿ ಇರುವುದಿಲ್ಲ, (ದ್ದರಿಂದ ಇಂಡಿವಿಜುವೆಲ್ ಆಗಿ ಕಟ್ಟಿಸಿಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ನೀರಿನ ಸಮಸ್ಯೆ. ಈ ನೀರಿನ ಸಮಸ್ಯೆ ಬಹಳ ಅಗಾಧವಾದ ಸಮಸ್ಯೆಯಾಗಿರುತ್ತದೆ. ಹಳ್ಳಿಗಳಲ್ಲಿ ಸ್ಲಮ್‌ಗಳನ್ನು ಉದ್ಧಾರ ಮಾಡುತ್ತೇವೆಂದು ಒಂದು ಸಾವಿರದ ಇನ್ನೂರು ಬೀದಿ ಕೊಳಾಯಿಗಳನ್ನು ಕೊಡುತ್ತೇವೆಂದು ವಾಟರ್‌ಸಿವಿರೇಜ್ ಬೋರ್ಡ್‌ನವರು ಒಂದು ಕೊಳಾಯಿಗೆ ೭,೫೦೦ ರೂಪಾಯಿಗಳಂತೆ ಕಾರ್ಪೊರೇಷನ್‌ನವರಿಂದ ತೆಗೆದುಕೊಂಡಿರುತ್ತಾರೆ. ಇದು ಸುಮಾರು ೨೪೦ ಲಕ್ಷ ರೂಪಾಯಿಗಳಾಗಿರುತ್ತದೆ. ಇಷ್ಟೊಂದು ದುಡ್ಡನ್ನು ಕಾರ್ಪೊರೇಷನ್‌ನವರು ಕೊಡತಕ್ಕಂಥ ಪರಿಸ್ಥಿತಿ ಬಂದಿರುತ್ತದೆ. ಹೀಗೆ ಮಾಡುವುದಕ್ಕೆ ಬದಲಾಗಿ ಏನಾದರೂ ಸಬ್‌ಸಿಡಿಯನ್ನು ಕೊಟ್ಟು ೫—೬ ವರ್ಷದ ಪ್ರೋಗ್ರಾಮ್ ಇಟ್ಟುಕೊಂಡು ಇಂಡಿವಿಜುವೆಲ್ ಆಗಿ ಮನೆಗಳಿಗೆ ವಾಟರ್ ಕನೆಕ್ಷನ್ ಕೊಡುವುದಾದರೆ ಒಂದು ರೀತಿಯಲ್ಲಿ ಅನುಕೂಲವಾಗುತ್ತದೆ. ಎಲ್ಲ ಬೀದಿ ಕೊಳಾಯಿಗಳಿಗೂ ಒಂದು ಕೊಳಾಯಿಗೆ ೭,೫೦೦ ರೂಪಾಯಿಕೊಡುವ ಹೊರೆ ಕಾರ್ಪೊರೇಷನ್‌ಗೆ ತಪ್ಪುತ್ತದೆ. ಇದರಿಂದ ಜನರಿಗೂ ಅನಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ. All the slums vest under the authority of slum clearance Board. ಎಂದು ಹೇಳುತ್ತಿರುವುದರಿಂದ ಬಿ.ಡಿ.ಎ ಅವರು ನಮಗೂ ಸ್ಲಮ್‌ಗೂ ಸಂಬಂಧವಿಲ್ಲವೆಂದು ಅವರು ಹೇಳುತ್ತಿರುತ್ತಾರೆ, ಕಾರ್ಪೊರೇಷನ್ ನವರೂಕೂಡ ಸ್ಲಮ್‌ಗೂ ನಮಗೂ ಸಂಬಂಧವಿಲ್ಲವೆಂದು ಹೇಳುತ್ತಿರುವುದರಿಂದ ಈ ಸ್ಲಮ್‌ಗಳ ಸಮಸ್ಯೆ ಒಂದು ರೀತಿ ನಿರ್ಲಕ್ಷವಾಗಿಬಿಟ್ಟಿದೆ. ಮೊನ್ನೆ ಮಾನ್ಯ ಮಂತ್ರಿಗಳು ಒಂದು ಆದೇಶವನ್ನು ಕೊಟ್ಟಿರುತ್ತಾರೆ ಅದೇನೆಂದರೆ ಹೊಸದಾಗಿ ಸ್ಲಮ್‌ಗಳಾಗಿದ್ದು ಕಾರ್ಪೊರೇಷನ್ ಏರಿಯಾಕ್ಕೆ ಅದು ಒಳಪಟ್ಟಿದ್ದರೆ ಅದನ್ನು ಕೂಡಲೇ ಬಿಡಿಎ ನೋಡಿಕೊಳ್ಳುತ್ತಾರೆಂದು ಹೇಳಿರುತ್ತಾರೆ. ಇದು ಎಷ್ಟರ ಮಟ್ಟಿಗೆ ಪರಿಣಾಮವಾಗುತ್ತದೋ ಅದನ್ನು ಈಗಲೇ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಸ್ಲಮ್‌ಗಳಿಗೆ ಮುಖ್ಯವಾಗಿ ಬೇಕಾಗಿರುವುದು ಕಕ್ಕಸ್ಸುಗಳು, ಎರಡನೆಯದಾಗಿ ನೀರು, ಮೂರನೆಯದಾಗಿ ಲೈಟು ಮತ್ತು ರಸ್ತೆಗಳು. ಇಷ್ಟು ಕೆಲಸ ಮಾಡಲು ಎಷ್ಟು ಹಣ ಖರ್ಚು ಮಾಡುತ್ತಾರೆಂಬುದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಎಲೆಕ್ಷನ್ ಟೈಮ್ ಬಂದಾಗ ಸ್ಲಮ್‌ಗಳ ಬಗ್ಗೆ ಯೋಚನೆ ಮಾಡುವುದು ಇದ್ದೇ ಇರುತ್ತದೆ.

[MR. CHAIRMAN (SRI H.T. KRISHNAPPA) in the Chair,]

ಅದರ ಬದಲು ಎಲೆಕ್ಷನ್ ಮುಂದೆ ಬರುವ ಹೊತ್ತಿಗೆ ಸಮಸ್ಯೆಗಳನ್ನು ಬಗೆಹರಿಸುತ್ತ ಪ್ರೋಗ್ರಾಮ್ ಹಾಕಿಕೊಳ್ಳದೆ ಹೋದರೆ ಬಹಳ ಕಷ್ಟವಾಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ :—ಮಾನ್ಯ ಅಧ್ಯಕ್ಷರೆ ಮಾನ್ಯ ಶಾಮಣ್ಣನವರ ಭಾಷಣ ಬಹಳ ವಿಚಾರ ಪೂರಿತವಾಗಿರುತ್ತದೆ. ನಮಗೂ ಕೇಳಬೇಕೆಂಬ ಆಶಯವಿರುತ್ತದೆ ಮುಂದೆ ನಾನ್‌ಆಫಿಷಿಯಲ್ ಬಿಸಿನೆಸ್ ತೆಗೆದುಕೊಂಡಾಗ ಅವರು ತಮ್ಮ ಭಾಷಣವನ್ನು ಮುಂದುವರಿಸಬಹುದು, ಏತಕ್ಕೆಂದರೆ ಕೋರಮ್ ಸ್ವಲ್ಪ ತಿನ್‌ಆಗಿರುತ ದೆಂದು ಹೇಳುತ್ತೇನೆ.

ಶ್ರೀಮತಿ ಎಸ್. ಪ್ರವೀಣ :—ಕೋರಮ್ ಕಡಿಮೆ ಏನು ಇಲ್ಲ. ಅಧ್ಯಕ್ಷರು ಸದಸ್ಯರನ್ನು ಕರೆದು ಕೊಂಡು ಹೋದರೆ ಕಡಿಮೆಯಾಗಬಹುದು.

ಚೇರ್ಮನ್‌ರವರು :—ಶ್ರೀ ಭಾಸ್ಕರಶೆಟ್ಟರು ಕೋರಮ್ ಇಲ್ಲವೆಂದು ಹೇಳಲಿಲ್ಲ. ಕೋರಮ್ ಕಡಿಮೆ ಆಗಿದೆ ಎಂದು ಹೇಳಿದರು ಅಷ್ಟೆ.

ಶ್ರೀ ಎಂ. ಚಂದ್ರಶೇಖರ್ :—ಮಾನ್ಯ ಸದಸ್ಯರು ಬೇರೆ ಕೆಲಸಕ್ಕೆ ಹೋಗುವ ಕಾಳಜಿಯಲ್ಲಿರುತ್ತಾರೆಂದು ತಿಳಿಯುತ್ತಿದೆ. ನೆನ್ನೆಯೂ ಕೂಡ ಇದೇ ರೀತಿ ಆಯಿತು. ಏಕಾಏಕಿ ವಿಚಾರವಾಗಿ ಈ ಮನೆಯ ಕಾರ್ಯಕಲಾಪಗಳನ್ನು ಈ ರೀತಿ ಸ್ಥಗಿತಗೊಳಿಸುವುದು ಸೂಕ್ತವಲ್ಲ. ಸಭೆಯನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ :—ನಾನ್‌ಅಫಿಷಿಯಲ್ ಬಿಸಿನೆಸ್ ತೆಗೆದುಕೊಂಡಾಗ ಮಾನ್ಯ ಸದಸ್ಯರು ಮುಂದುವರಿಸಬಹುದಲ್ಲ ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಕೇಳುವವರೇ ಇಲ್ಲದಿರುವಾಗ ಮಾತನಾಡಿ ಏನು ಪ್ರಯೋಜನವಿಲ್ಲ, ಮತ್ತು ಮಾತನಾಡುವವರಿಗೂ ಹುಮ್ಮಸ್ಸು ಬರುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಪಿ. ರಾಮ್‌ದೇವ್ :—ಮಾನ್ಯ ಶ್ರೀಕಂಠಯ್ಯನವರ ಮನಸ್ಸು ಎಲ್ಲೋ ಇದೆ ಎಂದು ಕಾಣುತ್ತದೆ.

ಚೇರ್ಮನ್‌ರವರು :—ನಾನು ತಮಗೆ ತಿಳಿಸುವುದೇನೆಂದರೆ ಒಟ್ಟು ಅಭಿಪ್ರಾಯ ಅಡ್ಜರ್ನ್ ಮಾಡಬೇಕೆಂದು ಇರುತ್ತದೆ. ಎಲ್ಲರೂ ಮುಂದುವರಿಸಬೇಕೆಂದರೆ ನನ್ನದೇನು ಅಭ್ಯಂತರವಿಲ್ಲ. ಸಭೆಯನ್ನು ಮುಂದುವರಿಸೋಣ.

ಶ್ರೀ ಎಂ.ವಿ. ರಾಜಶೇಖರನ್ :—ಮೇಲೆ ಇದೇ ಆದರೂ ಸಹಿತ ಈಗಾಗಲೇ ಮಾನ್ಯ ಮಂತ್ರಿಗಳು ಆತುರವಾಗಿದ್ದಾರೆ. ಹಾಗೆಯೇ ಅತ್ತ ಕಡೆಯ ಮಾನ್ಯ ಸದಸ್ಯರೂ ಕೂಡ ಆತುರವಾಗಿದ್ದಾರೆ. ಈ ವಿತ್ತಿನ ದಿವಸ ಮುಖ್ಯವಾಗಿ ಇರತಕ್ಕಂಥ ವಿಚಾರ ತಮಗೂ ತಿಳಿದಿರುತ್ತದೆ. ಶ್ರೀಮತಿ ಇಂದಿರಾಗಾಂಧಿಯವರು ಇಂದು ಬೆಂಗಳೂರಿಗೆ ಬರುತ್ತಿದ್ದಾರೆ. ಈವತ್ತಿನದಿವಸ ಅವರ ಕಾರ್ಯಕ್ರಮವಿರುತ್ತದೆ. ಆದ್ದರಿಂದ ಈ ವಿಚಾರವನ್ನು ಮುಂದಿನ ವಾರ ಇಟ್ಟುಕೊಂಡು ಮುಂದುವರಿಸುವುದು ಸೂಕ್ತವೆಂದು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ.

SRI B.B. SAYANAK :—Sir, many hon. Members are not present in this House. The problem relating to Slums does not confine to Bangalore City alone. It is there in almost all the cities. So, opportunity should be given to Members who desire to speak about this Therefore, we can take up this on the next Non-Official Business day.

ಶ್ರೀಮತಿ ಎಸ್. ಪ್ರಮೀಳ :—ಮಾನ್ಯ ಅಧ್ಯಕ್ಷರೆ ನಾವು ದಿವಸಕ್ಕೆ ೫೧ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳುತ್ತಿದ್ದೇವೆ. ನಾವು ತೆಗೆದುಕೊಂಡ ದುಡ್ಡಿಗಾದರೂ ಕೆಲಸ ಮಾಡಬೇಕು. ಒಂದೊಂದು ಸಾರಿ ಅಧ್ಯಕ್ಷಸ್ಥಾನದಲ್ಲಿ ಕುಳಿತಿರತಕ್ಕಂಥವರು ನಾವು ಎಷ್ಟೇ ಆಸಕ್ತಿಯಿಂದ ಮಾತನಾಡಬೇಕೆಂದಿದ್ದರು ಸಮಯವಿಲ್ಲವೆಂದು ಹೇಳುತ್ತಿರುತ್ತಾರೆ. ಇನ್ನೂ ಒಂದೂವರೆ ಘಂಟೆ ವೇಳೆ ಇದ್ದರೂ ಕೂಡ ಈಗಲೇ ಸಭೆಯನ್ನು ಮುಂದೂಡುತ್ತಿರುವುದು ಸೂಕ್ತ ಸಂಪ್ರದಾಯವಲ್ಲ ಸಾರ್ವಜನಿಕರ ಹಿತದೃಷ್ಟಿಯಿಂದ ಆದರೂ ಸಭೆಯನ್ನು ಮುಂದುವರಿಸುವುದು ಒಳ್ಳೆಯದೆಂದು ಹೇಳುತ್ತೇನೆ.

೧೧.೩೦ ಎ.ಎಂ

ಛೇರ್ಮನ್‌ರವರು:—ಶ್ರೀಮತಿ ಪ್ರಮಿಳ ಅವರ ಕಳಕಳಿ ಏನು ಎಂಬುದು ನನಗೆ ಅರ್ಥವಾಗುತ್ತದೆ. ನಿಮ್ಮ ಕಡೆಯ (ವಿರೋಧ ಪಕ್ಷದ) ಸದಸ್ಯರೇ ಫಲಪ್ರದವಾಗಿ ಚರ್ಚೆಯಾಗಬೇಕಾದರೆ ಸದಸ್ಯರ ಸಂಖ್ಯೆ ಹೆಚ್ಚಾಗಿರಬೇಕು, ಸಭೆಯಲ್ಲಿ ಹೆಚ್ಚುಹಿರಬೇಕು. ಆದ್ದರಿಂದ ಇವತ್ತು ಸಭೆಯನ್ನು ಅಡ್ಜರ್ನ್ ಮಾಡಿ ಈ ಚರ್ಚೆಯನ್ನು ಬೇರೆ ದಿವಸ ಇಟ್ಟುಕೊಳ್ಳಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಿಮ್ಮ ಪಕ್ಷದಲ್ಲೇ ಭಿನ್ನಾಭಿಪ್ರಾಯಗಳು ಬರದ ಹಾಗೆ ನೋಡಿಕೊಳ್ಳುವ ಏಸ್ತನ್ನು ನಾನು ನಿರೀಕ್ಷೆ ಮಾಡುತ್ತೇನೆ. ನಿಮ್ಮ ಪಕ್ಷದ ಸದಸ್ಯರೂ ಸಭೆಯನ್ನು ಅಡ್ಜರ್ನ್ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದರಿಂದ ನೀವು ಕೂಡ ಅದಕ್ಕೆ ಒಪ್ಪಿಕೊಳ್ಳಿ.

ಶ್ರೀಮತಿ ಎಸ್. ಪ್ರಮಿಳಾ :—ಸಭೆ ಏಳುವುದಕ್ಕೆ ಇನ್ನೂ ೧½ ಗಂಟೆಗಳ ಕಾಲ ಇದೆ. ಆದ್ದರಿಂದ ಇಷ್ಟು ಬೇಗ ಸಭೆಯನ್ನು ಅಡ್ಜರ್ನ್ ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ. ನಾವು ದಿನಕ್ಕೆ ೫೧ ರೂಪಾಯಿ ಸಂಬಳವನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೆ ತಕ್ಕಂತೆಯಾದರೂ ನಾವು ಕೆಲಸ ಮಾಡಬೇಕು ಇಲ್ಲದಿದ್ದರೆ ಯಾರೂ ಕೂಡ ಅಲೋಯನ್ಸ್ ತೆಗೆದುಕೊಳ್ಳಬಾರದು ಎಂದು ನಿರ್ಣಯ ಮಾಡಿ. ಆಗ ನನ್ನ ಅಭ್ಯಂತರವೇನೂ ಇಲ್ಲ. ಈಗ ಸಿಕ್ಕಿರುವ ಕಾಲವನ್ನು ವ್ಯರ್ಥ ಮಾಡುವುದು ಬೇಡ. ಈಗ ಸಭೆಯನ್ನು ಮುಂದೂಡುವುದು ಉಚಿತವಲ್ಲ ಎಂಬುದು ನನ್ನ ಅಭಿಪ್ರಾಯ.

ಶ್ರಿ ಬಿ. ಭಾಸ್ಕರ ಶೆಟ್ಟಿ :—ಮಾನ್ಯ ಸದಸ್ಯರು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಬೇಕು.

ಛೇರ್ಮನ್‌ರವರು :—ನಿಮ್ಮ ಪಕ್ಷದ (ವಿರೋಧಪಕ್ಷದ) ಸದಸ್ಯರ ಅಭಿಪ್ರಾಯಕ್ಕೆ ನೀವು (ಶ್ರೀಮತಿ ಪ್ರಮಿಳಾ) ಗೌರವ ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇನೆ. ನಿಮ್ಮ ಪಕ್ಷದವರೂ ಈಗ ಚರ್ಚೆ ಮಾಡುವುದು ಒಳ್ಳೆಯದಲ್ಲ ಎಂದು ಹೇಳಿದ್ದಾರೆ.

ಶ್ರೀಮತಿ ಎಸ್. ಪ್ರಮಿಳಾ :—ಪ್ರತಿ ದಿವಸ ನಾವು ಹೆಚ್ಚಿಗೆ ಮಾತನಾಡುವುದಕ್ಕೆ ಹೋದರೆ ಟೈಂ ಇಲ್ಲ ಎಂದು ಕೂರಿಸುತ್ತೀರಿ. ಇವತ್ತು ಇಷ್ಟೊಂದು ಕಾಲ ಇರುವಾಗ ಸಭೆಯನ್ನು ನಡೆಸುವುದಕ್ಕೆ ಆಗುವುದಿಲ್ಲ ಎಂದೂ ಹೇಳುತ್ತಿದ್ದೀರಿ. ಹೀಗೆ ಮಾಡಿದರೆ ಏನರ್ಥ ?

ಛೇರ್ಮನ್‌ರವರು :—ನಿಮಗೆ ಮಾತನಾಡುವ ಅವಕಾಶ ತಪ್ಪಿಹೋಗುತ್ತದೆ ಎಂಬ ಗಾಬರಿ ಬೇಡ ಮಂಜಿನ ಸಾರಿ ಚರ್ಚೆಗೆ ತೆಗೆದುಕೊಂಡಾಗ ನಿಮಗೆ ಅವಕಾಶ ಕೊಡುತ್ತೇವೆ, ಸಭೆಯಲ್ಲಿ ಹೆಚ್ಚಿಗೆ ಸದಸ್ಯರು ಮಂತ್ರಿ ಮಂತ್ರಿಗಳು ಇರುವಾಗ ನೀವು ಮಾತನಾಡಿದರೆ ಅದು ಪರಿಣಾಮಕಾರಿಯಾಗಿರುತ್ತದೆ.

ಶ್ರೀಮತಿ ಎಸ್. ಪ್ರಮಿಳಾ :—ಹೋದ ಕಾಲ ಹುತ್ತೆ ಬರುತ್ತದೆಯೇ ? ಕಳೆದು ಹೋದ ಕಾಲವನ್ನು ಮತ್ತೆ ತೆಗೆದುಕೊಳ್ಳುವುದಕ್ಕೆ ನಿಮಗೆ ಶಕ್ತಿ ಇದೆಯೇ ?

ಶ್ರೀ ಬಿ ಭಾಸ್ಕರ ಶೆಟ್ಟಿ :—ಇದೆ ಮುಂದೆ ನಾನ್ ಆಫೀಷಿಯಲ್ ಬಿಸಿನೆಸ್ ಇರುವ ದಿವಸ ಈ ನಿರ್ಣಯದ ಮೇಲೆ ಚರ್ಚೆ ಮಾಡಬಹುದು. ಆಗ ಮಾನ್ಯ ಸದಸ್ಯರೂ ಮಾತನಾಡಬಹುದು.

ಶ್ರೀ ಬಿ.ಎನ್. ಕೆಂಗೇಗೌಡ ;—ಸಭೆ ಮುಗಿಯುವುದಕ್ಕೆ ಇನ್ನೂ ಒಂದೂವರೆ ಗಂಟೆಕಾಲ ಇರುವಾಗಲೇ ಅಡ್ಜರ್ನ್ ಮಾಡಿದರೆ ಒಳ್ಳೆಯದಲ್ಲ ಎಂಬ ಅಭಿಪ್ರಾಯವನ್ನು ಮಾನ್ಯ ಸದಸ್ಯರಾದ ಪ್ರಮಿಳಾ ಅವರು ವ್ಯಕ್ತಪಡಿಸಿದ್ದಾರೆ. ನಾವು ಎಷ್ಟೋ ಬಾರಿ ಸಭೆಯ ಕಾಲ ಆದಮೇಲೂ ಹೆಚ್ಚು ಹೊತ್ತು ಕುಳಿತು ಚರ್ಚೆ ನಡೆಸಿದ್ದೇವೆ. ಅದಕ್ಕೆ ನಾವೇನೂ ಹೆಚ್ಚಿಗೆ ಓವರ್ ಟೈಂ ಅಲೋಯೆನ್ಸ್ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಈಗ ಸಭೆ ಮುಗಿಯುವುದಕ್ಕೆ ಇನ್ನೂ ಕಾಲವಿದ್ದರೂ ಕೂಡ ಅಡ್ಜರ್ನ್ ಮಾಡುವುದರಲ್ಲಿ ತಪ್ಪೇನಿಲ್ಲ, ಸಭೆ ಒಪ್ಪುವುದಾದರೆ ಅಡ್ಜರ್ನ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸದಸ್ಯರಾದ ಪ್ರಮಿಳಾ ಅವರಿಗೆ ಕೇಳಿಕೊಳ್ಳುತ್ತೇನೆ.

MR. CHAIRMAN :—Except the solitary exception of Smt. Pramila, everyone is in agreement that the House should be adjourned at this stage. The House therefore stands adjourned now to meet at 1 P. M on Monday.

The House adjourned at Thirty-five Minutes Past Eleven of the Clock to meet at One of the Clock on Monday, the 14th May 1979.